ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

EMAIL : dairyadadaari@gmail.com ಸಂಪುಟ: 01 ಸಂಚಿಕೆ: 177

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795 ಭಾನುವಾರ: 21-06-2026


## ವಿಕಸಿತ್ ಭಾರತ್ ರೋಜ್ ಗಾರ್ ಯೋಜನೆಯ ಫಲಾನುಭವಿಗಳೊಂದಿಗೆ ಸಂವಾದ

# ವಿಶ್ವವು ಭಾರತೀಯ ಯುವಕರ ಸಾಮರ್ಥ್ಯವನ್ನು ಗುರುತಿಸುತ್ತಿದೆ: ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ



ಧೈರ್ಯದ ದಾರಿ




**ರಾಯಚೂರು ಜೂನ್ 20:** ಭಾರತದ ಯುವಕರ ಪ್ರತಿಭೆ, ಕೌಶಲ್ಯ ಮತ್ತು ಸಾಮರ್ಥ್ಯಕ್ಕಾಗಿ ಜಾಗತಿಕವಾಗಿ ಅಭೂತಪೂರ್ವ ಮನ್ನಣೆ ದೊರೆಯುತ್ತಿದೆ. ವಿಶ್ವವು ಭಾರತೀಯ ಯುವಕರ ಸಾಮರ್ಥ್ಯವನ್ನು ಹೆಚ್ಚು ಹೆಚ್ಚು ಗುರುತಿಸುತ್ತಿದೆ ಎಂದು ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಹೇಳಿದರು.

ಜೂನ್ 19ರ ಶುಕ್ರವಾರ ದಂದು ನವ ದೆಹಲಿಯ ವಿಜ್ಞಾನ್ ಭವನದ ಸಭಾಂಗಣದಿಂದ ನಡೆದ ಪ್ರಧಾನ ಮಂತ್ರಿ ವಿಕಸಿತ್ ಭಾರತ್ ರೋಜ್ ಗಾರ್ ಯೋಜನೆಯ ಫಲಾನುಭವಿಗಳು, ಉದ್ಯಮದ ಪ್ರತಿನಿಧಿಗಳು ಮತ್ತು ಪಾಲುದಾರರೊಂದಿಗೆ ವರ್ಚುವಲ್ ವೇದಿಕೆ ಮೂಲಕ ಸಂವಾದ ನಡೆಸಿ, ಅವರು ಮಾತನಾಡಿದರು.

ಪ್ರತಿಯೊಬ್ಬ ಯುವಕನಿಗೂ ತನ್ನ ಸಾಮರ್ಥ್ಯವನ್ನು ಯಶಸ್ಸನ್ನಾಗಿ ಪರಿವರ್ತಿಸಲು ಅವಕಾಶ ಸಿಗುವಂತೆ ಮಾಡಲು ಸರ್ಕಾರ ಬದ್ಧವಾಗಿದೆ. ಪ್ರಧಾನ ಮಂತ್ರಿ ವಿಕಸಿತ್ ಭಾರತ್ ರೋಜ್ ಗಾರ್ ಯೋಜನೆಯು ಒಂದು ಉದ್ಯೋಗ ಯೋಜನೆಗಿಂತಲೂ ಮಿಗಿಲಾದದ್ದಾಗಿದೆ. ಮೊದಲ ಉದ್ಯೋಗಕ್ಕೆ ಸೇರುತ್ತಿರುವ ಯುವಜನರ ಆಕಾಂಕ್ಷೆಗಳನ್ನು ಬಲಪಡಿಸಲು ಹಾಗೂ ಉದ್ಯಮ ಮತ್ತು ಉದ್ಯೋಗಿಗಳ ನಡುವೆ ದೃಢವಾದ ಸೇತುವೆಯನ್ನು ನಿರ್ಮಿಸಲು ರೂಪಿಸಲಾದ ಈ ಯೋಜನೆಯ ಒಂದು ಉಪಕ್ರಮವಾಗಿದೆ ಎಂದರು.

ಅನೇಕ ಯೋಜನೆಗಳು ಸಾಮಾನ್ಯವಾಗಿ ಉದ್ಯೋಗಿಗಳು ಅಥವಾ ಉದ್ಯೋಗದಾತರ ಮೇಲೆ ಮಾತ್ರ ಗಮನ ಕೇಂದ್ರೀಕರಿಸುತ್ತವೆ. ಆದರೆ ಈ ಕಾರ್ಯಕ್ರಮವು ಏಕಕಾಲದಲ್ಲಿ ಇಬ್ಬರಿಗೂ ಬೆಂಬಲ ನೀಡುತ್ತದೆ. ತಮ್ಮ ವೃತ್ತಿಪರ ಪ್ರಯಾಣವನ್ನು ಪ್ರಾರಂಭಿಸುತ್ತಿರುವ ಯುವಜನರೊಂದಿಗೆ ಸರ್ಕಾರ ನಿಲ್ಲುತ್ತದೆ ಮತ್ತು ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಸಂಸ್ಥೆಗಳನ್ನು ಪ್ರೋತ್ಸಾಹಿಸುತ್ತದೆ ಎಂದರು.

ಸುಮಾರು 70 ಲಕ್ಷ ಹೊಸ ಉದ್ಯೋಗಗಳನ್ನು ಸೃಷ್ಟಿಸಲಾಗಿದೆ. ಮತ್ತು ಅಷ್ಟೇ ಸಂಖ್ಯೆಯ ಮೊದಲ ಬಾರಿಯ ಉದ್ಯೋಗಿಗಳನ್ನು ಸಾಮಾಜಿಕ ಭದ್ರತೆಯ ವ್ಯಾಪ್ತಿಗೆ ತರಲಾಗಿದೆ. ಸುಮಾರು 20 ಲಕ್ಷ ಯುವಕರು ತಮ್ಮ ಮೊದಲ ಉದ್ಯೋಗದಲ್ಲಿ ಆರು ತಿಂಗಳುಗಳನ್ನು ಪೂರೈಸಿದ್ದಾರೆ, ಹಾಗೆಯೇ ಸುಮಾರು 10 ಲಕ್ಷ ಫಲಾನುಭವಿಗಳು ಈ ಮೈಲಿಗಲ್ಲನ್ನು ಪೂರೈಸಿದ ನಂತರ ಯೋಜನೆಯ ಅಡಿಯಲ್ಲಿ ಈಗಾಗಲೇ ಪ್ರೋತ್ಸಾಹಕಗಳನ್ನು ಪಡೆದಿದ್ದಾರೆ ಎಂದು ಅವರು ಉಲ್ಲೇಖಿಸಿದರು.

2,000 ಕೋಟಿ ರೂ.ಗೂ ಹೆಚ್ಚು ಮೊತ್ತವನ್ನು ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗಿದೆ.



ಈ ಬೆಂಬಲವನ್ನು ಕೇವಲ ಆರ್ಥಿಕ ನೆರವಿಗಿಂತಲೂ ಮಿಗಿಲಾದದ್ದು, ಇದು ಯುವಜನರ ಕಠಿಣ ಪರಿಶ್ರಮಕ್ಕೆ ದೇಶ ನೀಡುವ ಮನ್ನಣೆ ಮತ್ತು ಅವರ ಭವಿಷ್ಯದ ಮೇಲಿರುವ ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ. ಸರ್ಕಾರ, ಉದ್ಯಮ ಮತ್ತು ಯುವಜನರು ಒಟ್ಟಾಗಿ ಕೆಲಸ ಮಾಡಿದಾಗ ಉದ್ಯೋಗ ಸೃಷ್ಟಿಯು ವೇಗವನ್ನು ಪಡೆಯುತ್ತದೆ. ಯುವಜನರಿಗೆ ಅವಕಾಶಗಳು ದೊರೆಯುವ, ಕೈಗಾರಿಕೆಗಳಿಗೆ ಪ್ರೋತ್ಸಾಹ ಸಿಗುವ ಮತ್ತು ಉದ್ಯೋಗ ಸೃಷ್ಟಿಯೇ ಒಂದು ರಾಷ್ಟ್ರೀಯ ಅಭಿಯಾನವಾಗುವ ನವ ಭಾರತದ ಪ್ರತಿಬಿಂಬವೇ ಈ ಉಪಕ್ರಮವಾಗಿದೆ ಎಂದರು. 2ನೇಪುಟಕ್ಕೆ

# ಕಿಶೋರಿ ಕೇಂದ್ರಕ್ಕೆ ಸತ್ಯ ನಾರಾಯಣ ಶೆಟ್ಟಿ ಭೇಟಿ: ಪರಿಶೀಲನೆ



ಧೈರ್ಯದ ದಾರಿ

**ರಾಯಚೂರು ಜೂನ್ 20:** ರಾಯಚೂರು ನಗರದ ರೈಲ್ವೇ ಸ್ಟೇಷನ್ ರಸ್ತೆಯ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಾರಂಭಿಸಲಾದ ಕಿಶೋರಿ ಕೇಂದ್ರಕ್ಕೆ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಸತ್ಯ ನಾರಾಯಣ ಶೆಟ್ಟಿ ಅವರು ಗುರುವಾರ ಭೇಟಿ ಪರಿಶೀಲಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.ಕಿಶೋರಿಯರಿಯರೊಂದಿಗೆ ಮಕ್ಕಳ ಹಕ್ಕುಗಳ ಕುರಿತು ಚರ್ಚೆ ಮಾಡಿದರು. ಕಿಶೋರಿ ಕೇಂದ್ರ ಉತ್ತಮ ಯೋಜನೆಯಾಗಿದ್ದು, ಇದರ ಸದುಪಯೋಗಪಡಿಸಿಕೊಳ್ಳಬೇಕೆಂದು ವಿದ್ಯಾರ್ಥಿನಿಯರಿಗೆ ಸಲಹೆ ನೀಡಿದರು.ಈ ವೇಳೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕಿ ಶರಣಮ್ಮ ಕಾರನೂರು ಅವರು ಕಿಶೋರಿ ಕೇಂದ್ರದ ಉದ್ದೇಶವನ್ನು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಿಗೆ ಪರಿಚಯಿಸಿದರು.ಇದೇ ಸಂದರ್ಭದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎಂ.ಡಿಗೋಕುಲ್ ಹುಸೇನ, ಮಕ್ಕಳ ಸಹಾಯವಾಣಿಯ ಸಿಬ್ಬಂದಿಗಳು ಉಪಸ್ಥಿತಿದ್ದರು.


ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ

6360866626


# ತಾಲೂಕು ಕೇಂದ್ರದಲ್ಲಿ ಒಂದೇ ಆಧಾರ್ ನೋಂದಣಿ ಕೇಂದ್ರ: ಸಾರ್ವಜನಿಕರ ಪರದಾಟ; ಹೆಚ್ಚುವರಿ ಕೇಂದ್ರ ತೆರೆಯಲು ಸಿದ್ದರಾಮಯ್ಯ ಸ್ವಾಮಿ ಒತ್ತಾಯ

ಧೈರ್ಯದ ದಾರಿ




**ಸಿರವಾರ, ಜೂ. 20:** ಆಧಾರ್ ಕಾರ್ಡ್ ಇಂದಿನ ದಿನಮಾನದಲ್ಲಿ ಪ್ರತಿಯೊಬ್ಬರ ಜೀವನಕ್ಕೂ ಅತ್ಯಗತ್ಯವಾದ ದಾಖಲೆಯಾಗಿದೆ. ಆದರೆ, ಸಿರವಾರ ತಾಲೂಕು ಕೇಂದ್ರದಲ್ಲಿ ಕೇವಲ ಒಂದೇ ಒಂದು ನೋಂದಣಿ ಕೇಂದ್ರವಿದ್ದು, ಸಾರ್ವಜನಿಕರು ತಿದ್ದುಪಡಿ ಮತ್ತು ಹೊಸ ನೋಂದಣಿಗಾಗಿ ತೀವ್ರ ಪರದಾಡುವಂತಾಗಿದೆ. ಕೂಡಲೇ ಹೆಚ್ಚುವರಿ ಕೇಂದ್ರಗಳನ್ನು ತೆರೆದು ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಸಿದ್ದರಾಮಯ್ಯ ಸ್ವಾಮಿ ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, "ಸಿರವಾರ ತಾಲೂಕು ಕೇಂದ್ರವಾಗಿ ಮೇಲ್ದರ್ಜೆಗೇರಿದರೂ, ಆಧಾರ್ ನೋಂದಣಿ ವ್ಯವಸ್ಥೆ ಮಾತ್ರ ಅಧೋಗತಿಗೆ ತಲುಪಿದೆ. ಈ ಹಿಂದೆ ತಹಸೀಲ್ದಾರ್ ಕಚೇರಿ, ವಿವಿಧ ಬ್ಯಾಂಕ್‌ಗಳು ಹಾಗೂ ಸಿಎಸ್‌ಸಿ (C S C) ಕೇಂದ್ರಗಳಲ್ಲಿ ಆಧಾರ್ ನೋಂದಣಿ ಮತ್ತು ತಿದ್ದುಪಡಿ ಸೌಲಭ್ಯವಿತ್ತು. ಆದರೆ, ಕಳೆದ ನಾಲ್ಕು ತಿಂಗಳಿಂದ ಎಲ್ಲೆಡೆ ಈ ಸೇವೆ ಸ್ಥಗಿತಗೊಂಡಿದ್ದು, ಕೇವಲ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (SBI) ಶಾಖೆಯಲ್ಲಿ ಮಾತ್ರ ಅವಕಾಶ ನೀಡಲಾಗಿದೆ. ಇದರಿಂದಾಗಿ ಸಾರ್ವಜನಿಕರು ಗಂಟೆಗಟ್ಟಲೆ ಸರತಿಯಲ್ಲಿ ನಿಲ್ಲುವಂತಾಗಿದೆ" ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

**ಜನಸಾಮಾನ್ಯರ ಪರದಾಟ:** ಶೈಕ್ಷಣಿಕ ವರ್ಷ ಪ್ರಾರಂಭವಾಗಿದ್ದು, ವಿದ್ಯಾರ್ಥಿಗಳು ಶಾಲಾ ದಾಖಲಾತಿಗಾಗಿ ಆಧಾರ್ ಕಾರ್ಡ್ ಪಡೆಯಲು ಹರಸಾಹಸ ಪಡುತ್ತಿದ್ದಾರೆ. ಇನ್ನು ರೈತರು ಬಿತ್ತನೆ ಬೀಜ ಮತ್ತು ರಸಗೊಬ್ಬರ ಖರೀದಿಗೆ, ಹಿರಿಯ ನಾಗರಿಕರು, ವಿಧವೆಯರು ಮತ್ತು ವಿಕಲಚೇತನರು ಸಂಧ್ಯಾ ಸುರಕ್ಷಾ ಸೇರಿದಂತೆ ವಿವಿಧ ಪಿಂಚಣಿ ಯೋಜನೆಗಳ ಲಾಭ ಪಡೆಯಲು ಅಂಚೆ ಕಚೇರಿಯಲ್ಲಿ ಆಧಾರ್ ಕಾರ್ಡ್ ಕಡ್ಡಾಯಗೊಳಿಸಲಾಗಿದೆ. ಆದರೆ, ಪಟ್ಟಣದಲ್ಲಿ ಆಧಾರ್ ಕೇಂದ್ರಗಳ ಕೊರತೆಯಿಂದಾಗಿ ಫಲಾನುಭವಿಗಳು ದಿನನಿತ್ಯ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

**ಪ್ರಮುಖ ಬೇಡಿಕೆಗಳು:** ಪಟ್ಟಣದ ವಿವಿಧ ಬಡಾವಣೆಗಳ ಜನರಿಗೆ ಅನುಕೂಲವಾಗುವಂತೆ ಹೆಚ್ಚುವರಿ ಆಧಾರ್ ನೋಂದಣಿ ಕೇಂದ್ರಗಳನ್ನು ಕೂಡಲೇ ಆರಂಭಿಸಬೇಕು.


ಅಗತ್ಯ ದಾಖಲೆಗಳ ಪರಿಶೀಲನೆಯಲ್ಲಿ ಅನಗತ್ಯ ವಿಳಂಬ ಮಾಡದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಬೇಕು.

ನೋಂದಣಿಯ ನೆಪದಲ್ಲಿ ಸಾರ್ವಜನಿಕರಿಂದ ಹೆಚ್ಚಿನ ಹಣ ವಸೂಲಿ ಮಾಡುವುದನ್ನು ತಡೆಗಟ್ಟಲು ಕ್ರಮ ಕೈಗೊಳ್ಳಬೇಕು.

ಕೂಡಲೇ ಜಿಲ್ಲಾಡಳಿತ ಮತ್ತು ಸಂಬಂಧಪಟ್ಟ ಇಲಾಖಾಧಿಕಾರಿಗಳು ಈ ಸಮಸ್ಯೆಗೆ ಸ್ಪಂದಿಸಿ, ಸಾರ್ವಜನಿಕರ ಅಲೆದಾಟಕ್ಕೆ ಕಡಿವಾಣ ಹಾಕಬೇಕೆಂದು ಸಿದ್ದರಾಮಯ್ಯ ಸ್ವಾಮಿ ಒತ್ತಾಯಿಸಿದ್ದಾರೆ.

# ಏಮ್ಸ್ ಹೋರಾಟ ಸಮಿತಿ ಮಾನ್ವಿ ವತಿಯಿಂದ ಪ್ರಧಾನ ಮಂತ್ರಿಗಳಿಗೆ ಮನವಿ

ಧೈರ್ಯದ ದಾರಿ




**ಮಾನ್ವಿ:** ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಏಮ್ಸ್ ಹೋರಾಟ ಸಮಿತಿ ಮಾನ್ವಿ ವತಿಯಿಂದ ಪ್ರಧಾನ ಮಂತ್ರಿಗಳಿಗೆ ಗ್ರೇಡ್-2 ತಹಶೀಲ್ದಾರ್ ಅಬ್ದುಲ್ ವಾಹಿದ್ ರವರ ಮೂಲಕ ಮನವಿ ಸಲ್ಲಿಸಿ ಏಮ್ಸ್ ಹೋರಾಟ ಸಮಿತಿ ಮಾನ್ವಿ ಸಂಚಾಲಕರಾದ ಹೆಚ್. ಶರ್ಫುದ್ದೀನ್ ಪೋತ್ನಾಳ್ ಮಾತನಾಡಿ ರಾಯಚೂರಿಗೆ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯಾದ ಏಮ್ಸ್ ಅನ್ನು ಮಂಜೂರು ಮಾಡುವಂತೆ ನಿರಂತರವಾಗಿ 1500 ದಿನಗಳಿಂದ ಅನಿರ್ದಿಷ್ಟವಾದಿ ಧರಣಿ ಸತ್ಯಾಗ್ರಹವನ್ನು ಹಮ್ಮಿಕೊಂಡರು ಕೂಡ ಕೇಂದ್ರ ಸರಕಾರ ಸ್ಪಂದಿಸದೆ ನಿರಂತರವಾಗಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಅತ್ಯಂತ ಹಿಂದುಳಿದಿರುವ ರಾಯಚೂರು ಜಿಲ್ಲೆಗೆ ಅನ್ಯಾಯವನ್ನು ಮಾಡುತ್ತ ಬಂದಿದೆ ಕೇಂದ್ರ ಸರಕಾರವು ಎಲ್ಲಾ ಅಭಿವೃದ್ಧಿ ಯೋಜನೆಗಳನ್ನು ಹುಬ್ಬಳ್ಳಿ ಮತ್ತು ಧಾರವಾಡ ಜಿಲ್ಲೆಗಳಿಗೆ ನೀಡುತ್ತಿದೆ ಈ ಭಾಗಕ್ಕೆ ಮಂಜೂರಾಗಬೇಕಾಗಿದ ಐ.ಐ.ಟಿ,ಐಐಐಟಿ, ಟೆಕ್ಸಟೈಲ್ ಪಾರ್ಕ,ಫೋರೆನ್ಸಿಕ್ ವಿಜ್ಞಾನ ವಿಶ್ವವಿದ್ಯಾಲಯ ಸೇರಿದಂತೆ ಕೇಂದ್ರಸರಕಾರದ ಮಹಾತ್ವಕಾಂಕ್ಷೆ ಯೋಜನೆಗಳು ಸ್ಥಾಪನೆಯಾಗಿವೆ, ಅದ್ದರೆ ಹಿಂದುಳಿದ ರಾಯಚೂರು ಜಿಲ್ಲೆಗೆ ಕೇಂದ್ರ ಸರಕಾರ ಅಭಿವೃದ್ಧಿ ಯೋಜನೆಗಳನ್ನು ನೀಡುತ್ತಿಲ್ಲ ಎಂದು ಅರೋಪಿಸಿದರು.

ಏಮ್ಸ್ ಹೋರಾಟ ಸಮಿತಿ ಮಾನ್ವಿ ಸಂಚಾಲಕರಾದ ಎಂ.ಎ.ಹೆಚ್. ಮುಖೀಮ್ , ರಾಜು ತಾಳಿಕೋಟೆ, ಭೀಮರಾಯ ಸೀತಿಮನಿ, ಬಿ.ವಿ.ರೆಡ್ಡಿ, ಮಹಾಂತೇಶ ಓಲೇಕಾರ,ಶಂಕ್ರಪ್ಪ ನಕ್ಕುಂದಿ, ಶರಣಪ್ಪ,ಅನೀಲ್ ಕುಮಾರ,ಸೈಯಾದ್ ಅಬ್ದುಲ್ ಗಯಾಸ್, ರಾಜಶೇಖರ ಪಾಟೀಲ್ ಭೋಗವತಿ, ಕೆ.ಎನ್.ಸಂದೀಪ್, ಆಲಿಂಖಾನ್ ಸೇರಿದಂತೆ ಸರ್ವೋದಯ ಫಾರ್ಮಸಿ ಕಾಲೇಜಿನ ಪ್ರಾಚರ್ಯರಾದ ನವೀನ್ ಕುಮಾರ, ಪ್ರವೀಣ್ ಕುಮಾರ್ ಮತ್ತು ವಿದ್ಯಾರ್ಥಿಗಳು ಇದ್ದರು.

# ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟುಮಾಡುತ್ತಿರುವ ಪ್ರೊ. ಕೆ. ಎಸ್. ಭಗವಾನ್ ವಿರುದ್ಧ ಕ್ರಮ ಕೈಗೊಳ್ಳಿ: ಮಾರುತಿ ನಾಯಕ

ಧೈರ್ಯದ ದಾರಿ



**ಮಾನ್ವಿ:** ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಹಿಂದೂ ಜನ 'ಜಾಗೃತಿ ಸಮಿತಿ ವತಿಯಿಂದ ಮುಖ್ಯಮಂತ್ರಿಗಳಿಗೆ ಗ್ರೇಡ್-2 ತಹಶೀಲ್ದಾರ್ ಅಬ್ದುಲ್ ವಾಹಿದ್ ರವರ ಮೂಲಕ ಮನವಿ ಸಲ್ಲಿಸಿ ಹಿಂದೂ ಜನಜಾಗೃತಿ ಸಮಿತಿ ಮಾನ್ವಿ ಶಾಖಾ ಸಮನ್ವಯಕರಾರದ ಮಾರುತಿ ನಾಯಕ ಮಾತನಾಡಿ ರಾಜ್ಯದ ಹರಿಹರ ನಗರದ ಬಿ. ಕೃಷ್ಣಪ್ಪ ಮೈತ್ರಿವನದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ವತಿಯಿಂದ ಜೂ.9 ರಂದು ಅಯೋಜಿಸಲಾದ ಪ್ರೊ. ಬಿ. ಕೃಷ್ಣಪ್ಪ ಜಯಂತಿ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದ ವೇದಿಕೆಯಲ್ಲಿ 2ನೇಪುಟಕ್ಕೆ►

# ಸತತ ಪ್ರಯತ್ನ ಮತ್ತು ನಿರಂತರ ಅಭ್ಯಾಸದಿಂದ ಯಶಸ್ಸು ಸಾಧ್ಯ: ಶಂಕ್ರಪ್ಪ ನಕ್ಕುಂದಿ

ಧೈರ್ಯದ ದಾರಿ




**ಮಾನ್ವಿ --** ಪಟ್ಟಣದ ಡಾ. ಬಿ. ಆರ್. ಅಂಬೇಡ್ಕರ್ ವಿದ್ಯಾರ್ಥಿ ವಸತಿ ನಿಲಯದಲ್ಲಿ ಬಿ.ಎ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬಿಳ್ಕೊಡುಗೆ ಸಮಾರಂಭ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.ಈ ಕಾರ್ಯಕ್ರಮವನ್ನು ಉದ್ಘಾಟಿಸಿ ವಿಶೇಷ ಉಪನ್ಯಾಸಕರಾಗಿ ಭಾಗವಹಿಸಿ ಶಂಕ್ರಪ್ಪ ನಕ್ಕುಂದಿ ಮಾತನಾಡಿ ವಸತಿ ನಿಯಲ ಎನ್ನುವುದು ಎರಡನೆಯ ಮನೆ ಇದ್ದಂತೆ ವಸತಿ ನಿಲಯವನ್ನು ಸ್ವಚ್ಛತೆ ಇಂದ ಕಾಪಾಡಿಕೊಳ್ಳುವುದು ಪ್ರತಿಯೊಬ್ಬ ವಿದ್ಯಾರ್ಥಿಗಳ ಜವಾಬ್ದಾರಿಯಾಗಿದೆ.ವಿದ್ಯಾರ್ಥಿಗಳು ಸಮಾಜದ ಅಂಕುಡೊಂಕುಗಳಿಗೆ, ಚುಚ್ಚು ಮಾತುಗಳಿಗೆ ಕಿವಿಗೊಡದೆ ತಮ್ಮ ನಿರ್ದಿಷ್ಟ ಗುರಿಗಳತ್ತ ಮುನ್ನುಗ್ಗಬೇಕು ಅಲ್ಲದೆ ಪ್ರತಿಯೊಬ್ಬ ವಿದ್ಯಾರ್ಥಿಗಳು ಸತತ ಪ್ರಯತ್ನ ನಿರಂತರ ಅಭ್ಯಾಸದ ಕಡೆ ಗಮನಹರಿಸಬೇಕೆಂದು ತಿಳಿಸಿದರು. ಸರಕಾರದ ಪ್ರತಿಯೊಂದು ಯೋಜನೆಗಳನ್ನು ಸದುಪಯೋಗವನ್ನು ಪಡೆದುಕೊಂಡು ವಿದ್ಯಾರ್ಥಿಗಳು ಸರಕಾರಿ ಹುದ್ದೆಯನ್ನು ಪಡೆಯುವ ನಿಟ್ಟಿನಲ್ಲಿ ಪ್ರಯತ್ನಿಸಿದಾಗ ಮಾತ್ರ ತಂದೆ ತಾಯಿಯ 2ನೇ ಪುಟಕ್ಕೆ

ಮೊದಲನೇ ಪುಟದಿಂದ

# ವಿಶ್ವವು ಭಾರತೀಯ ಯುವಕರ ಸಾಮರ್ಥ್ಯವನ್ನು ಗುರುತಿಸುತ್ತಿದೆ: ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ

ಕಳೆದ ಹನ್ನೆರಡು ವರ್ಷಗಳಲ್ಲಿ, ಉದ್ಯೋಗದ ಪ್ರತಿಯೊಂದು ಮಾರ್ಗವನ್ನೂ ಬಲಪಡಿಸಲು ಸರ್ಕಾರ ಕೆಲಸ ಮಾಡಿದೆ. ಮೂಲಸೌಕರ್ಯ ಮತ್ತು ನಾವೀನ್ಯತೆಯಿಂದ ಹಿಡಿದು ಉತ್ಪಾದನೆ, ಡಿಜಿಟಲ್ ಆರ್ಥಿಕತೆ, ಬಾಹ್ಯಾಕಾಶ ತಂತ್ರಜ್ಞಾನ ಮತ್ತು ಸ್ಟಾರ್ಟ್ ಅಪ್ ಗಳವರೆಗೆ ವಿವಿಧ ವಲಯಗಳಲ್ಲಿ ಮಹತ್ವದ ಪ್ರಯತ್ನಗಳನ್ನು ಮಾಡಲಾಗಿದೆ. ಮೇಕ್ ಇನ್ ಇಂಡಿಯಾ, ವೋಕಲ್ ಫಾರ್ ಲೋಕಲ್, ಸ್ಥಳೀಯ ಉತ್ಪನ್ನಗಳನ್ನು ಜಾಗತಿಕ ಮಾರುಕಟ್ಟೆಗಳಿಗೆ ಕೊಂಡೊಯ್ಯುವ ಪ್ರಯತ್ನಗಳು ಮತ್ತು ಮಿಷನ್ ಮ್ಯಾನುಫ್ಯಾಕ್ಚರಿಂಗ್ ನಂತಹ ಉಪಕ್ರಮಗಳು ಉದ್ಯೋಗ ಮತ್ತು ಸ್ವಯಂ–ಉದ್ಯೋಗ ಎರಡರ ಮಾರ್ಗಗಳನ್ನೂ ವಿಸ್ತರಿಸಿವೆ ಎಂದು ಪ್ರಧಾನಮಂತ್ರಿಗಳು ಹೇಳಿದರು.

ಭಾರತದ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಹಾಗೂ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವರಾದ ಡಾ. ಮನ್ಸುಖ್ ಮಾಂಡವಿಯಾ ಅವರು ಮಾತನಾಡಿದರು.

ಸಂವಾದ ಕಾರ್ಯಕ್ರಮದಲ್ಲಿ ಭಾರತ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ಹಾಗೂ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯದ ರಾಜ್ಯ ಸಚಿವರಾದ ಶೋಭಾ ಕರಂದ್ಲಾಜೆ ಅವರು ಭಾಗಿಯಾಗಿದ್ದರು.

ಈ ಕಾರ್ಯಕ್ರಮದ ನೇರ ಪ್ರಸಾರವನ್ನು ರಾಯಚೂರು ನಗರದ ಬಿಜನಗೇರಾ ರಸ್ತೆಯ ನವೋದಯ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದು, ಇದರಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ರಾಯಚೂರು ಗ್ರಾಮೀಣ ಕ್ಷೇತ್ರದ ಮಾಜಿ ಶಾಸಕ ತಿಪ್ಪರಾಜು ಹವಾಲ್ದಾರ್ ಅವರು ಮಾತನಾಡಿ, ದೇಶದ ಜಮ್ಮು ಮತ್ತು ಕಾಶ್ಮೀರದಿಂದ ಕನ್ಯಾಕುಮಾರಿ ಹಾಗೂ ಕೇಂದ್ರಾಡಳಿತ ಪ್ರದೇಶಗಳನ್ನು ಒಳಗೊಂಡು ದೇಶದ 200ಕ್ಕೂ ಹೆಚ್ಚಿನ ಸ್ಥಳಗಳಿಂದ ಯೋಜನೆ ಫಲಾನುಭವಿಗಳೊಂದಿಗೆ ಸಂವಾದ ಕಾರ್ಯಕ್ರಮವನ್ನು ಹೊಮ್ಮಿಕೊಳ್ಳುವ ಮೂಲಕ ನಮ್ಮ ಪ್ರಧಾನಿಗಳು ಎಲ್ಲರ ಮೆಚ್ಚುಗೆ ಪಾತ್ರರಾಗಿದ್ದಾರೆ ಎಂದರು.

ಹಿಂದಿನ ಸರ್ಕಾರಗಳು ಪಂಚ ವಾರ್ಷಿಕ ಯೋಜನಗಳ ಮೂಲಕ ದೇಶದ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನ ಮಾಡಲಾಗುತ್ತಿತ್ತು. ಆದರೆ ಮೋದಿಯವರು ಅಧಿಕಾರಕ್ಕೆ ಬಂದ ನಂತರ ದೇಶದ ವಿವಿಧ ಕ್ಷೇತ್ರಗಳಲ್ಲಿ ಅಭಿವೃದ್ಧಿಗೆ ನಿರ್ದಿಷ್ಟ ಕಾಲದ ಗುರಿಯನ್ನು ಹೊಂದಿದ್ದಾರೆ. ಅವರ ದೂರದೃಷ್ಟಿಯ ಆಲೋಚನೆಗಳನ್ನು ಎಲ್ಲರೂ ಮುಚ್ಚುವಂತೆ ಮಾಡಿದೆ ಎಂದರು.

ಕಲ್ಯಾಣ ಕರ್ನಾಟಕ ಭಾಗದ ರಾಯಚೂರು ಹಾಗೂ ಯಾದಗಿರಿ ಜಿಲ್ಲೆಯು ಮಹತ್ವಾಕಾಂಕ್ಷೆ ಜಿಲ್ಲೆಯಾಗಿದ್ದು, ಈ ಭಾಗದಲ್ಲಿ ಉದ್ಯೋಗವನ್ನು ಸೃಷ್ಟಿಸಲು ಉದ್ಯೋಗದಾತರು ಮುಂದೆ ಬರಬೇಕು. ಪ್ರಧಾನಮಂತ್ರಿ ಅವರು ಉದ್ಯೋಗಂ ಯುವಕರ ಲಕ್ಷಣ ಎಂಬ ಉದ್ದೇಶದೊಂದಿಗೆ ದೇಶದ ಯುವಕರಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ. ಶೇ.67ರಷ್ಟು ಯುವ ಸಮೂಹವು ದೇಶದಲ್ಲಿದೆ ಎಂದರು.

ಯೋಜನೆಯ ಅರ್ಹ ಫಲಾನುಭವಿಗಳ ಯೋಜನೆಯ ಸೌಲಭ್ಯಗಳನ್ನು ಸರಿಯಾಗಿ ಬಳಕೆ ಮಾಡಿಕೊಳ್ಳಬೇಕು. ರಾಯಚೂರಿನ ನವೋದಯ ಸಂಸ್ಥೆಯಲ್ಲಿ 6 ರಿಂದ 7ಸಾವಿರ ಜನರಿಗೆ ಉದ್ಯೋಗ ನೀಡುತ್ತಿದೆ. ಇದೇ ರೀತಿಯಲ್ಲಿ ಆನೇಕರು ಉದ್ಯೋಗವನ್ನು ಸೃಷ್ಟಿಸಬೇಕು ಎಂದರು.

ರಾಯಚೂರಿನ ಪ್ರಾದೇಶಿಕ ಸಹಾಯಕ ಭವಿಷ್ಯ ನಿಧಿ ಆಯುಕ್ತರಾದ ನಿರಾಜ್ ಕುಮಾರ್ ಅವರು ಮಾತನಾಡಿ, ಪ್ರಧಾನಮಂತ್ರಿ ವಿಕಸಿತ ಭಾರತ ಉದ್ಯೋಗ ಯೋಜನೆಯು ಭಾರತದಲ್ಲಿ ಖಾಸಗಿ ವಲಯದಲ್ಲಿ ಮೊದಲ ಬಾರಿಗೆ ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಯೋಜನೆಯಡಿಯಲ್ಲಿ 3.5 ಕೋಟಿ ಉದ್ಯೋಗಗಳನ್ನು ಸೃಷ್ಟಿಸುವ ಗುರಿಯನ್ನು ಹೊಂದಿದೆ ಎಂದರು.

ಯೋಜನಯಡಿ 1 ಲಕ್ಷ ಕೋಟಿ ರೂ. ವೆಚ್ಚದೊಂದಿಗೆ ಈ ಯೋಜನೆಯು 2025ರ ಆಗಸ್ಟ್ 1ರಿಂದ 2027ರ ಜುಲೈ 31ರ ಅವಧಿಯಲ್ಲಿ 3.5 ಕೋಟಿ ಉದ್ಯೋಗಗಳನ್ನು ಸೃಷ್ಟಿಸುವ ಗುರಿಯನ್ನು ಹೊಂದಿದೆ. ಈ ಯೋಜನೆಯು ಎರಡು ವಿಭಾಗಗಳನ್ನು ಒಳಗೊಂಡಿದ್ದು, ಭಾಗ–ಎ ಮೊದಲ ಬಾರಿಗೆ ಕೆಲಸ ಮಾಡುವವರ ಮೇಲೆ ಗಮನ ಕೇಂದ್ರೀಕರಿಸಿದರೆ ಭಾಗ–ಬಿ ಉದ್ಯೋಗದಾತರು ಅಥವಾ ನಿಯೋಜಕರ ಮೇಲೆ ಗಮನ ಕೇಂದ್ರೀಕರಿಸಲಾಗಿದೆ ಎಂದರು.

ಯೋಜನೆಯಡಿಯಲ್ಲಿ ಖಾಸಗಿ ವಲಯದಲ್ಲಿ ತಮ್ಮ ಮೊದಲ ಉದ್ಯೋಗವನ್ನು ಪಡೆಯುವ ಯುವ ಉದ್ಯೋಗಿಳು 15,000 ರೂಪಾಯಿಗಳ ಪ್ರೋತ್ಸಾಹವನ್ನು ಪಡೆಯುತ್ತಾರೆ.

ಕಂಪನಿಗಳನ್ನು ಪ್ರೋತ್ಸಾಹಿಸಲು ಸರ್ಕಾರವು ಎರಡು ವರ್ಷಗಳ ಅವಧಿಗೆ ಪ್ರತಿ ಉದ್ಯೋಗಿಗೆ ತಿಂಗಳಿಗೆ 3,000 ರೂ. ಪ್ರೋತ್ಸಾಹವನ್ನು ನೀಡುತ್ತದೆ. ಭಾರತವನ್ನು ಉತ್ಪಾದನಾ ಕೇಂದ್ರವನ್ನಾಗಿ ಮಾಡುವ ಗುರಿಯೊಂದಿಗೆ ಈ ವಲಯದ ಕಂಪನಿಗಳು ಹೆಚ್ಚುವರಿ ಎರಡು ವರ್ಷಗಳವರೆಗೆ ಮೂರನೇ ಮತ್ತು ನಾಲ್ಕನೇ ವರ್ಷದ ಉದ್ಯೋಗ ಈ ಪ್ರೋತ್ಸಾಹವನ್ನು ಪಡೆಯುತ್ತವೆ ಎಂದರು.

ಕಾರ್ಯಕ್ರಮದ ನಂತರ ಪ್ರಧಾನ ಮಂತ್ರಿ ವಿಕಸಿತ್ ಭಾರತ್ ರೋಜ್ ಗಾರ್ ಯೋಜನೆಯಡಿ ವಿವಿಧ ಫಲಾನುಭವಿಗಳಿಗೆ ಉದ್ಯೋಗ ಪ್ರಮಾಣ ಪತ್ರವನ್ನು ವಿತರಿಸಲಾಯಿತು.

ಇದೇ ಸಂದರ್ಭದಲ್ಲಿ ಕಾಟನ್ ಮಿಲ್ಲರ್ಸ್ ಅಸೋಸಿಯೇಷನ್ ಅಧ್ಯಕ್ಷರಾದ ವಿ. ಲಕ್ಷ್ಮೀಕಾಂತ ರೆಡ್ಡಿ, ರೈಸ್ ಮಿಲ್ಲರ್ಸ್ ಅಸೋಸಿಯೇಷನ್ ಅಧ್ಯಕ್ಷರಾದ ಸಾವಿತ್ರಿ ಪುರುಷೋತ್ತಮ, ನವೋದಯ ಶಿಕ್ಷಣ ಸಂಸ್ಥೆಯ ನಿರ್ದೇಶಕ ಸುರೇಶ ಬಾಬು ಸೇರಿದಂತೆ ರಾಯಚೂರು, ಯಾದಗಿರಿ ಹಾಗೂ ಭಾಗಲಕೋಟೆ ಜಿಲ್ಲೆಯ ಫಲಾನುಭವಿಗಳು, ಇಪಿಎಫ್ ಕಚೇರಿಯ ಅಧಿಕಾರಿ, ಸಿಬ್ಬಂದಿಗಳು ಇದ್ದರು.

# ಸತತ ಪ್ರಯತ್ನ ಮತ್ತು ನಿರಂತರ ಅಭ್ಯಾಸದಿಂದ ಯಶಸ್ಸು ಸಾಧ್ಯ: ಶಂಕ್ರಪ್ಪ ನಕ್ಕುಂದಿ

ಪರಿಶ್ರಮಕ್ಕೆ ತಕ್ಕ ಪ್ರತಿಫಲ ಸಿಕ್ಕಂತಾಗುತ್ತದೆ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಆಂಜನೇಯ ನಾಯಕ ನಸಲಾಪುರ ಮಾತನಾಡಿ ಬೀಳ್ಕೊಡುಗೆ ಸಮಾರಂಭ ಕಾರ್ಯಕ್ರಮ ಎನ್ನುವುದು ಒಂದು ಔಪಚಾರಿಕ ಕಾರ್ಯಕ್ರಮ ವಿದ್ಯಾರ್ಥಿಗಳು ವಸತಿ ನಿಲಯದಲ್ಲಿ ಇಷ್ಟು ದಿನಗಳ ಕಾಲ ಕಳೆದ ಸವಿನೆನಪುಗಳನ್ನು ಮೆಲಕು ಹಾಕಿ ಮುಂದಿನ ಭವಿಷ್ಯವನ್ನು ಕಟ್ಟಿಕೊಳ್ಳುವುದಕ್ಕೆ ಇಂದಿನಿಂದ ಹೊಸ ಯುಗ ಆರಂಭವಾವಾಗಿದೆ,ನಿಮ್ಮ ಕನಸನ್ನ ನನಸು ಮಾಡಿಕೊಳ್ಳುವುದಕ್ಕೆ ಸಿದ್ದರಾಗಬೇಕು.ವಿದ್ಯಾರ್ಥಿಗಳು ತಮ್ಮ ತಂದೆ ತಾಯಿಗಳ ಕಷ್ಟಗಳನ್ನು ಅರ್ಥ ಮಾಡಿಕೊಂಡು ಓದಿನ ಕಡೆ ಹೆಚ್ಚು ಗಮನ ನೀಡಬೇಕು.

ವಿದ್ಯಾರ್ಥಿಗಳು ಯಾವುದೇ ದುಃಶ್ಚಟಗಳಿಗೆ ಬಲಿಯಾಗಿ ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳಬಾರದು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.ಅಲ್ಲದೇ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ಮಾಡಿಕೊಂಡು ಸರ್ಕಾರಿ ಹುದ್ದೆಯನ್ನು ಪಡೆಯುವ ನಿಟ್ಟಿನಲ್ಲಿ ಪ್ರಯತ್ನ ಮಾಡಬೇಕು. ಪ್ರಯತ್ನ ಎಂಬ ಚಂದಿರನನ್ನು ಬೆಳಗಿದರೆ ಯಶಸ್ಸು ಎಂಬ ಬೆಳದಿಂಗಳು ಸಿಗತ್ತದೆ. ಯಶಸ್ಸನ್ನು ಪಡೆದುಕೊಳ್ಳಲು ಪ್ರಯತ್ನಿಸಿ ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ವಸತಿ ನಿಲಯದ ಮೇಲ್ವಿಚಾರಕರಾದ ಹುಸೇನ್ ಬಡಿಗೇರ ಇವರು ಪ್ರಾಸ್ತವಿಕ ನುಡಿಯನ್ನು ಮಾತನಾಡಿ ವಸತಿ ನಿಲಯದಲ್ಲಿ ವಿದ್ಯಾರ್ಥಿಗಳ ಜೊತೆ ಜೊತೆಯಾಗಿ ನಡೆದುಕೊಂಡು ವಿದ್ಯಾರ್ಥಿಗಳ ಕಷ್ಟಕ್ಕೆ ಸ್ಪಂದಿಸುವ ಕೆಲಸವನ್ನು ಮಾಡಿ ಕೊಂಡು ಬಂದಿದ್ದೇನೆ ಎಂದು ಹೇಳಿದರು. ಪ್ರತಿಯೊಬ್ಬ ವಿದ್ಯಾರ್ಥಿಗಳು ಸರಕಾರಿ ನೌಕರಿಯನ್ನು ಪಡೆದುಕೊಂಡಾಗ ಸಾರ್ಥಕವಾಗುತ್ತದೆ ಎಂದು ಹೇಳಿದರು.ಪ್ರತಿಯೊಬ್ಬ ವಿದ್ಯಾರ್ಥಿಗಳ ಮುಂದಿನ ಜೀವನ ಸುಖಕರವಾಗಿರಲಿ. ಮುಂದಿನ ವಿದ್ಯಾಭ್ಯಾಸದ ಜೀವನ ಉಜ್ವಲವಾಗಿರಲಿ ಎಂದು ಶುಭ ಹಾರೈಸಿದರು. ಪರಿಶಿಷ್ಟ ವರ್ಗಗಳ ಸಮಾಜ ಕಲ್ಯಾಣಾಧಿಕಾರಿಗಳಾದ ಕೆ. ವಿಜಯ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ ಪ್ರತಿ ವರ್ಷ ಬೀಳ್ಕೊಡುಗೆ ಸಮಾರಂಭ ಕಾರ್ಯಕ್ರಮವನ್ನು ಮಾಡುತ್ತೀರುವುದು ಸಂತೋಷದ ಕ್ಷಣವಾಗಿದೆ ಎಂದು ಹೇಳಿದರು.

ಜಗತ್ತಿನಲ್ಲಿ ಬದುಕಬೇಕಾದರೆ ಪ್ರಯೋಜನಕಾರಿಯಾಗಿ ಬದುಕಿದಾಗ ಸಾರ್ಥಕವಾಗುತ್ತದೆ, ಪ್ರತಿಯೊಬ್ಬ ವಿದ್ಯಾರ್ಥಿಗಳು ಡಾ. ಬಿ. ಆರ್ ಅಂಬೇಡ್ಕರ ಅವರಂತೆ ಬದುಕಬೇಕು. ನನ್ನ ಜನ ಸಮಾಜದಲ್ಲಿ ಜವಾಬ್ದಾರಿಯುತವಾಗಿ ಜೀವನವನ್ನು ಕಟ್ಟಿಕೊಂಡು ಸಾಗಿದಾಗ ಅವರ ಕನಸು ನನಸಾಗಲು ಸಾಧ್ಯವಾಗುತ್ತದೆ ಎಂದು ಹೇಳಿದರು.ವಿದ್ಯಾರ್ಥಿಗಳು ಉತ್ತಮವಾಗಿ ಅಭ್ಯಾಸ ಮಾಡಿ ಮುಂದಿನ ಜೀವನ ಸುಖರವಾಗಿ ಸಾಗಲಿ ಎಂದು ಹಾರೈಸಿದರು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಾದ ಉದಯ, ಅಂಜಿನೇಯ್ಯ ಮಾತನಾಡಿ ಹಾಸ್ಟೆಲ್ ಅಲ್ಲಿ ಕಳೆದ ಜೀವನದ ಸವಿನೆನಪುಗಳನ್ನ ಹಂಚಿಕೊಂಡು ಅನಿಸಿಕೆಗಳನ್ನು ಹಂಚಿಕೊಂಡರು.ಕಾರ್ಯಕ್ರಮದಲ್ಲಿ ವಸತಿ ನಿಲಯದ ಮೇಲ್ವಿಚಾರಕರಾದ ಶ್ರೀನಿವಾಸ, ಯಲ್ಲಾಲಿಂಗ, ಸುಂದರಾಜ್,ಅಡುಗೆ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.ಕಾರ್ಯಕ್ರ ಮದ ನಿರೂಪಣೆಯನ್ನು ರಾಹುಲ್ ವಿದ್ಯಾರ್ಥಿ ನೆರವೇರಿಸಿಕೊಟ್ಟರು ದುರ್ಗೇಶ್ ಪ್ರಾರ್ಥನೆ ಗೀತೆಯನ್ನು ಹಾಡಿದರು.ಸಂಗಮೇಶ ಸ್ವಾಗತಿಸಿದರು.ದೇವರಾಜ್ ವಂದಿಸಿದರು

# ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟುಮಾಡುತ್ತಿರುವ ಪ್ರೊ. ಕೆ. ಎಸ್. ಭಗವಾನ್ ವಿರುದ್ಧ ಕ್ರಮ ಕೈಗೊಳ್ಳಿ: ಮಾರುತಿ ನಾಯಕ

ಭಾಗವಹಿಸಿದ .ಪ್ರೊ. ಕೆ ಎಸ್ ಭಗವಾನ್ ರವರು ಉದ್ದೇಶಪೂರ್ವಕವಾಗಿ ಹಿಂದೂಗಳು ಅತ್ಯಂತ ಶ್ರದ್ಧೆ ಮತ್ತು ಭಕ್ತಿಗಳಿಂದ ಪೂಜಿಸುವ ಪ್ರಭು ಶ್ರೀರಾಮರ ಕುರಿತು ಆಧಾರರಹಿತ ಆರೋಪಗಳನ್ನು ಮಾಡುವುದರ ಜೊತೆಗೆ ಹಿಂದೂ ದೇವತೆಗಳ ಕುರಿತು ಅವಹೇಳನಕಾರಿ, ಪ್ರಚೋದನಕಾರಿ ಮತ್ತು ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟುಮಾಡುವ ಹೇಳಿಕೆ ನೀಡಿರುವ ಸಾರ್ವಜನಿಕ ಶಾಂತಿ ಮತ್ತು ಸೌಹಾರ್ದತೆಗೆ ನಿರಂತರವಾಗಿ ಧಕ್ಕೆ ಉಂಟುಮಾಡುತ್ತಿರುವ ಪ್ರೊ. ಕೆ. ಎಸ್. ಭಗವಾನ್ ಅವರ ವಿರುದ್ಧ ಸೂಕ್ತವಾದ ಕಾನೂನು ಕ್ರಮವನ್ನು ಜರುಗಿಸಬೇಕು ಎಂದು ಒತ್ತಾಯಿಸಿದರು.

ಸುರೇಶ ನಾಡಗೌಡ, ನಾಗರಾಜ ಶೆಟ್ಟಿ, ವರಪ್ರಸಾದ,ದತ್ತು ಚಲ್ಮಲ್, ಪ್ರಭು ಜೇಗರಕಲ್ಲ್, ರಾಜಶೇಖರ, ನಿಂಗು ಮಡಿವಾಳ,ದುರುಗಪ್ಪ,ಆಂಜನೇಯ್ಯ ನೀರಮಾನ್ವಿ.ಬಿ.ಪಿ.ರಾಘವೇಂದ್ರ ,ಬಸವಪುತ್ರ, ಸೇರಿದಂತೆ ಇನ್ನಿತರರು ಇದ್ದರು.

# ಮೊಹರಂ ಹಿನ್ನೆಲೆ: ಸಿರುವಾರ್ ಪೊಲೀಸ್ ಠಾಣೆಯಲ್ಲಿ ಶಾಂತಿ ಸಭೆ; ಅಲೈಕುಣಿತ ನಿಷೇಧಿಸಿ ಸಿಪಿಐ ಶಶಿಕಾಂತ್ ಎಂ. ಖಡಕ್ ಸೂಚನೆ



ಧೈರ್ಯದ ದಾರಿ

**ಸಿರುವಾರ್:** ಮುಂಬರುವ ಮೊಹರಂ ಹಬ್ಬವನ್ನು ಶಾಂತಿ ಮತ್ತು ಸೌಹಾರ್ದತೆಯಿಂದ ಆಚರಿಸುವ ನಿಟ್ಟಿನಲ್ಲಿ, ಇಂದು ಸಿರುವಾರ್ ಪೊಲೀಸ್ ಠಾಣೆಯಲ್ಲಿ ಶಾಂತಿ ಪಾಲನಾ ಸಭೆಯನ್ನು ಆಯೋಜಿಸಲಾಗಿತ್ತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಿಪಿಐ ಶಶಿಕಾಂತ್ ಎಂ. ಅವರು ಮಾತನಾಡಿ, "ಮೊಹರಂ ಹಬ್ಬವು ಭಾವೈಕ್ಯತೆಯ ಸಂಕೇತವಾಗಿದೆ. ಹಬ್ಬದ ಆಚರಣೆಯ ಸಂದರ್ಭದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು ಎಲ್ಲರ ಆದ್ಯ ಕರ್ತವ್ಯವಾಗಿದೆ. ಈ ಬಾರಿಯ ಹಬ್ಬದ ಆಚರಣೆಯಲ್ಲಿ ಅಲೈಕುಣಿತವನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಸಾರ್ವಜನಿಕರು ಮತ್ತು ಆಯೋಜಕರು ಈ ನಿಯಮವನ್ನು ಕಡ್ಡಾಯವಾಗಿ ಪಾಲಿಸಬೇಕು," ಎಂದು ಸ್ಪಷ್ಟ ಸೂಚನೆ ನೀಡಿದರು.

ಮುಂದುವರೆದು ಮಾತನಾಡಿದ ಅವರು, "ಹಬ್ಬದ ಮೆರವಣಿಗೆಯ ಮಾರ್ಗಗಳಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸ್ ಇಲಾಖೆ ಕಟ್ಟೆಚ್ಚರ ವಹಿಸಿದೆ. ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು. ಹಬ್ಬದ ಆಚರಣೆಯು ಕೇವಲ ಧಾರ್ಮಿಕ ಚೌಕಟ್ಟಿನಲ್ಲಿ, ಸೌಹಾರ್ದಯುತವಾಗಿ ನಡೆಯಬೇಕು," ಎಂದು ಮನವಿ ಮಾಡಿದರು.

ಈ ಶಾಂತಿ ಸಭೆಯಲ್ಲಿ ಮುಸ್ಲಿಂ ಸಮಾಜದ ಮುಖಂಡರು ಸೇರಿದಂತೆ ಸರ್ವಜನಾಂಗದ ಗಣ್ಯರು ಹಾಗೂ ಹಿರಿಯರು ಪಾಲ್ಗೊಂಡಿದ್ದರು. ಸಭೆಯಲ್ಲಿ ಭಾಗವಹಿಸಿದ್ದ ಮುಖಂಡರು, ಪೊಲೀಸ್ ಇಲಾಖೆಯ ಆದೇಶಗಳಿಗೆ ಸಂಪೂರ್ಣ ಬೆಂಬಲ ಸೂಚಿಸಿ, ಹಬ್ಬವನ್ನು ಶಾಂತಿಯುತವಾಗಿ ನಡೆಸಿಕೊಡುವ ಭರವಸೆಯನ್ನು ನೀಡಿದರು.

# ವಕ್ಫ್ ಇನ್ಸ್ಪೆಕ್ಟರ್ ಬಡ್ತಿ ಪಡೆದ ಇಬ್ರಾಹಿಂ ಹೊನ್ನಕಟಮಳ್ಳಿಗೆ ಸನ್ಮಾನ

ಧೈರ್ಯದ ದಾರಿ

**ಮಾನ್ವಿ, ಜೂ.20 :** ರಾಯಚೂರು ಜಿಲ್ಲಾ ವಕ್ಫ್ ಸಲಹಾ ಸಮಿತಿ ಕಚೇರಿಯಲ್ಲಿ ಎಸ್ ಡಿ.ಎ. ಯಿಂದ ಇನ್ಸ್ಪೆಕ್ಟರ್ ಹುದ್ದೆಗೆ ಬಡ್ತಿ ಪಡೆದ ಜನಾಬ್ ಇಬ್ರಾಹಿಂ ಹೊನ್ನಕಟಮಳ್ಳಿ ಅವರನ್ನು ಕೆ.ಕೆ. ಪ್ರಿಂಟರ್ಸ್‌ನಲ್ಲಿ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮದ್ಲಾಪುರ ಜಾಮಿಯಾ ಮಸ್ಜಿದ್ ಕಾರ್ಯದರ್ಶಿ ಮಹಿಬೂಬ್ ಮದ್ಲಾಪುರ ಹಾಗೂ ಸ್ನೇಹಿತರ ಬಳಗದಿಂದ ಶಾಲು ಹೊದಿಸಿ, ಹಾರ ಹಾಕಿ ಹಾಗೂ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಮಾತನಾಡಿದ ಗಣ್ಯರು, ಇಬ್ರಾಹಿಂ ಗೌರಂಪೇಟ ಅವರು ತಮ್ಮ ಕರ್ತವ್ಯನಿಷ್ಠೆ, ಪ್ರಾಮಾಣಿಕತೆ ಹಾಗೂ ಸೇವಾ ಮನೋಭಾವದಿಂದ ಈ ಸಾಧನೆ ಮಾಡಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಉನ್ನತ ಸ್ಥಾನಗಳನ್ನು ಅಲಂಕರಿಸಿ ಸಮಾಜಕ್ಕೆ ಉತ್ತಮ ಸೇವೆ ಸಲ್ಲಿಸಲಿ ಎಂದು ಶುಭ ಹಾರೈಸಿದರು.



ಮಾಜಿ ಪುರಸಭೆ ಸದಸ್ಯ ಎಚ್.ಬಿ.ಎಂ. ಭಾಷಾ, ಮುಖ್ಯಶಿಕ್ಷಕ ನಹಿವಾ ಚೌದ್ರಿ, ಡಾ. ವಲೀಪಾಷಾ, ಮಹೇಬೂಬ್ ಬುರಹಾನಪುರ, ಸದ್ದಾಂ ಹುಸೇನ್ ಉಮಳಿಹೊಸೂರು, ಕಾತರಕಿ ಶಕ್ಷಾವಲಿಸಾಬ್, ಅಮೀನ್ ಖುರೇಷಿ, ಖಾಜಾಹುಸೇನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ರಾಯಚೂರಿಗೆ ‘ಏಮ್ಸ್’ ಮಂಜೂರಾತಿಗೆ ಆಗ್ರಹ

## 1500ನೇ ದಿನದ ಹೋರಾಟಕ್ಕೆ ಸನ್‌ರೈಸ್ ಶಿಕ್ಷಣ ಸಂಸ್ಥೆ ಭರ್ಜರಿ ಬೆಂಬಲ





**ಸಿಂಧನೂರು (ಜೂನ್ 20):** ರಾಯಚೂರು ಜಿಲ್ಲೆಯಲ್ಲಿ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ (AIIMS) ಸ್ಥಾಪನೆಗೆ ಆಗ್ರಹಿಸಿ ಕಳೆದ 1500 ದಿನಗಳಿಂದ ನಿರಂತರವಾಗಿ ನಡೆಯುತ್ತಿರುವ ಐತಿಹಾಸಿಕ ಹೋರಾಟಕ್ಕೆ ಸಿಂಧನೂರಿನಲ್ಲಿ ಭಾರಿ ಬೆಂಬಲ ವ್ಯಕ್ತವಾಗಿದೆ. ಇಲ್ಲಿನ ಸನ್‌ರೈಸ್ ಶಿಕ್ಷಣ ಸಂಸ್ಥೆಗಳ ನೇತೃತ್ವದಲ್ಲಿ ನೂರಾರು ವಿದ್ಯಾರ್ಥಿಗಳು ಹಾಗೂ ಪ್ರಮುಖರು ಬೃಹತ್ ಕಾಲ್ನಡಿಗೆ ಜಾತ ನಡೆಸಿ, ಮಾನ್ಯ ತಹಶೀಲ್ದಾರರ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.‘ಏಮ್ಸ್ ಸಿಗದಿದ್ದರೆ ಪ್ರತ್ಯೇಕ ರಾಜ್ಯದ ಕೂಗು’: ಪೂಜ್ಯ ಶ್ರೀಗಳ ಎಚ್ಚರಿಕೆ ಜಾತದ ಬಳಿಕ ನಡೆದ ಸಭೆಯನ್ನುದ್ದೇಶಿಸಿ ಮಾತನಾಡಿದ ಯದ್ದಲದೊಡ್ಡಿ ನೇಗಿಲಯೋಗಿ ಶ್ರೀಗಳು "ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಗೆ ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆ ಅತ್ಯಗತ್ಯ. ಸರ್ಕಾರ ತಕ್ಷಣವೇ ಈ ಭಾಗದ ಜನರ ನ್ಯಾಯಯುತ ಬೇಡಿಕೆಯನ್ನು ಈಡೇರಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಇಲ್ಲಿ ಪ್ರತ್ಯೇಕ ರಾಜ್ಯದ ಕೂಗು ಹುಟ್ಟಿಕೊಳ್ಳುವ ಸಾಧ್ಯತೆಯಿದೆ," ಎಂದು ಎಚ್ಚರಿಸಿದರು.

ಮತ್ತೊಬ್ಬ ಧರ್ಮಗುರುಗಳಾದ ಪೂಜ್ಯ ಅಮೋಘಸಿದ್ದೇಶ್ವರ ತುರುವಿಹಾಳ ಮಾದಯ್ಯ ಗುರುಗಳು ಮಾತನಾಡಿ, ಹಿಂದುಳಿದ ಕಲ್ಯಾಣ ಕರ್ನಾಟಕ ಭಾಗದ ಆರೋಗ್ಯ ಮತ್ತು ಶೈಕ್ಷಣಿಕ ಸುಧಾರಣೆಗೆ ಏಮ್ಸ್ ಅತ್ಯಂತ ಅವಶ್ಯಕವಾಗಿದೆ ಎಂದರು. ಐಐಟಿ ಕಳೆದುಕೊಂಡಿದ್ದೇವೆ, ಏಮ್ಸ್ ಬಿಡೆವು: ಕಂಬಳಿ ಏಮ್ಸ್ ತಾಲೂಕು ಹೋರಾಟ ಸಮಿತಿಯ ಪ್ರತಿನಿಧಿ ಡಿ ಎಸ್ ಕಂಬಳಿ ಮಾತನಾಡಿ, "2022ರ ಮೇ 13ರಿಂದ ನಿರಂತರವಾಗಿ ಆರಂಭವಾದ ಹೋರಾಟಕ್ಕೆ ಇಂದು 1500 ದಿನಗಳು ಸಂದಿವೆ. ಈ ಹಿಂದೆ ರಾಜಕಾರಣಿಗಳ ಇಚ್ಛಾಶಕ್ತಿಯ ಕೊರತೆಯಿಂದಾಗಿ ನಾವು ರಾಯಚೂರಿಗೆ ಬರಬೇಕಿದ್ದ ಐಐಟಿ (IIT) ಕಳೆದುಕೊಂಡಿದ್ದೇವೆ. ಆದರೆ, ನಮ್ಮ ಹಕ್ಕಾದ ಏಮ್ಸ್ ಅನ್ನು ಯಾವುದೇ ಕಾರಣಕ್ಕೂ ಬಿಟ್ಟುಕೊಡುವುದಿಲ್ಲ. ರಾಯಚೂರು–ಯಾದಗಿರಿ ಭಾಗದ ಆರೋಗ್ಯದ ಸಂಜೀವಿನಿಯಾದ ಏಮ್ಸ್ ಅನ್ನು ಹೋರಾಟದ ಮೂಲಕವೇ ಪಡೆದುಕೊಳ್ಳುತ್ತೇವೆ," ಎಂದು ಸಂಕಲ್ಪ ತೊಟ್ಟರು. ಕಲ್ಯಾಣ ಕರ್ನಾಟಕದ ಆರೋಗ್ಯ ಸುಧಾರಣೆಗೆ ಏಮ್ಸ್ ದಿಕ್ಸೂಚಿ ಸನ್‌ರೈಸ್ ನರ್ಸಿಂಗ್ ಕಾಲೇಜಿನ ಪ್ರಾಚಾರ್ಯರಾದ ಲಾಜರ್ ಸಿರಿಲ್ ಜಿ ಮಾತನಾಡಿ, "ಕಲ್ಯಾಣ ಕರ್ನಾಟಕ ಭಾಗದಲ್ಲಿ ತಾಯಿ ಮರಣ, ಶಿಶು ಮರಣ, ರಕ್ತಹೀನತೆ ಹಾಗೂ ಅಪೌಷ್ಟಿಕತೆಯಂತಹ ಗಂಭೀರ ಆರೋಗ್ಯ ಸಮಸ್ಯೆಗಳು ಇಂದಿಗೂ ಇವೆ. ರಾಯಚೂರಿಗೆ ಏಮ್ಸ್ ಮಂಜೂರಾದರೆ ಉನ್ನತ ಮಟ್ಟದ ಚಿಕಿತ್ಸೆ, ವೈದ್ಯಕೀಯ ಸಂಶೋಧನೆ ಮತ್ತು ತಜ್ಞ ವೈದ್ಯರ ಲಭ್ಯತೆ ಸಾಧ್ಯವಾಗಿ, ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಕ್ರಾಂತಿಕಾರಿ ಸುಧಾರಣೆಯಾಗಲಿದೆ," ಎಂದರು.

ಹೋರಾಟದಲ್ಲಿ ಭಾಗವಹಿಸಿದ ಪ್ರಮುಖರುಗಳು ಈ ಬೃಹತ್ ಪ್ರತಿಭಟನಾ ಜಾತದಲ್ಲಿ ವಿವಿಧ ಸಂಘಟನೆಗಳ ಪ್ರಮುಖರು ಹಾಗೂ ಶಿಕ್ಷಣ ಸಂಸ್ಥೆಗಳು ಭಾಗವಹಿಸಿ ಬೆಂಬಲ ಸೂಚಿಸಿದವು. ಪ್ರಮುಖರಾದ ಜಮಾತ್–ಎ–ಇಸ್ಲಾಂ ಸಂಘಟನೆಯ ಅಧ್ಯಕ್ಷ ಬಿ. ಹುಸೇನ್ ಸಾಬ್, ಕನ್ನಡಪರ ಹೋರಾಟಗಾರರಾದ ಸುರೇಶ್ ಗೊಬ್ಬರಕಲ್, ದೌಲತ್ ಸಾಬ್, ಹಿರಿಯ ಪತ್ರಕರ್ತರು ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳ ಪದಾಧಿಕಾರಿಗಳು,

ಜೊತೆಗೆ ಶಿಕ್ಷಣ ಸಂಸ್ಥೆಗಳಾದ ಸನ್‌ರೈಸ್ ಗ್ರೂಪ್ ಆಫ್ ಇನ್ಸಿಟ್ಯೂಷನ್ಸ್, ಸನ್‌ರೈಸ್ ನರ್ಸಿಂಗ್ ಕಾಲೇಜು, ರೇಣುಕಾ ನರ್ಸಿಂಗ್ ಕಾಲೇಜು, ಹಾಗೂ ಬಸವಶ್ರೀ ನರ್ಸಿಂಗ್ ಕಾಲೇಜುಗಳ ಪ್ರಾಚಾರ್ಯರು, ಉಪನ್ಯಾಸಕರು, ಸಿಬ್ಬಂದಿ ವರ್ಗ ಮತ್ತು ನೂರಾರು ವಿದ್ಯಾರ್ಥಿಗಳು ಭಾಗಿಯಾಗಿದ್ದರು, ಸಭೆಯ ಕೊನೆಯಲ್ಲಿ, ಕಲ್ಯಾಣ ಕರ್ನಾಟಕ ಭಾಗದ ಜನರ ಜೀವನಾಡಿಯಾಗಿರುವ ರಾಯಚೂರು ಜಿಲ್ಲೆಗೆ ತಕ್ಷಣವೇ ಏಮ್ಸ್ (AIIMS) ಮಂಜೂರು ಮಾಡಬೇಕೆಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಒತ್ತಾಯಿಸುವ ಒಮ್ಮತದ ನಿರ್ಣಯವನ್ನು ಕೈಗೊಳ್ಳಲಾಯಿತು

# "ನನ್ನಪ್ಪ ನನ್ನ ಹೀರೋ"




## ಗಂಗಾಶ್ರೀ ವಿಶ್ವಕರ್ಮ ಮಾನ್ವಿ

ನಮಸ್ಕಾರ ಸ್ನೇಹಿತರೆ ಇಂದಿನ ದಿನ ಏನು ವಿಶೇಷತೆ ಎಲ್ಲರಿಗೂ ಗೊತ್ತೇ ಇದೆ ಅಪ್ಪಂದಿರ ದಿನ. ನಮ್ಮ ನಿಮ್ಮೆಲ್ಲರ ಹೀರೋ ನಮ್ಮ ಜನಕನಾ

ಮೊದಲಿಗೆ ನಾನು ನಿಮಗೆಲ್ಲರಿಗೂ
ಒಂದು ಪ್ರಶ್ನೆಯನ್ನು ಕೆಳಬಯಸುವೆ ಅದೇನೆಂದರೆ ನಿಮ್ಮ ಜೀವನದ ಹೀರೋ ಯಾರೆಂದು ಹೇಳುವಿರಾ!!?

ನನಗೆ ಗೊತ್ತು ಬಣ್ಣ ಹಚ್ಚಿ ನಮ್ಮನ್ನು ರಂಜಿಸುವ ನಾಯಕ ನಟರ ಬಗ್ಗೆ ಹೇಳುತ್ತೀರಾ ಅಲ್ಲವೇ ಅವರು ಪ್ರತಿಫಲಕ್ಕಾಗಿ ಕೆಲಸ ಮಾಡುವ ನಾಯಕರುಬಣ್ಣ ಹಚ್ಚುವ ಮೂಲಕ ನಮ್ಮನ್ನು ರಂಜಿಸುತ್ತಾರೆ.
ಆದರೆ ಬಣ್ಣನೆ ಹಚ್ಚದೆ ಯಾವುದೇ ಪ್ರತಿಫಲ ಬಯಸದೇ ನಮಗಾಗಿ ಹಗಲಿರುಳು ದುಡಿಯುವ ತಂದೆಯೇ ನಿಜವಾದ ನಮ್ಮ ನಿಮ್ಮೆಲ್ಲರ ನಾಯಕ ??

ತಂದೆಯವರು ನಮ್ಮ ಜೀವನದ ನಿಜವಾದ ಹೀರೋಗಳು ಆದ್ದರಿಂದ ನಾವುಗಳು ಅವರ ಆಸೆ ಗಳನ್ನು ಈಡೇರಿಸಲು ಪ್ರಯತ್ನಿಸಬೇಕು..

ಅಪ್ಪ ಯಾವುದೇ ಕಾರಣಕ್ಕೂ ಮಕ್ಕಳ ಮೇಲೆ ಒತ್ತಡವನ್ನು ಹಾಕುವುದಿಲ್ಲ ನಿಮಗೆ ಇಷ್ಟ ವಾದ ಕೆಲಸವನ್ನೇ ಮಾಡಿ ಎಂದು ಹೇಳುವಾಗ ಏಕೈಕ ಜೀವ

**.1. ಮಗಳ ಮೊದಲ ಹೀರೋ .**

ಪ್ರತಿಯೊಬ್ಬ ತಂದೆಯು ತನ್ನ ಮಗಳನ್ನು ತನ್ನ ಎರಡನೇ ತಾಯಿ ಎಂದು ಭಾವಿಸುತ್ತಾನೆ ಆದ್ದರಿಂದಲೇ ಪ್ರತಿ ತಂದೆಯು ಮೊದಲ ಮಗು ಹೆಣ್ಣು ಮಗುವೆ ಆಗಲಿ ಎಂದು ಬಯಸುತ್ತಾನೆ ಪ್ರೀತಿಸುತ್ತಾರೆ ಹಾಗೆಯೇ ಪ್ರತಿ ಮಗಳ ಮೊದಲ ಹೀರೋ, ಗೆಳೆಯ, ಮತ್ತು ಉತ್ತಮ ಸಲಹೆಗಾರ, ತನ್ನ ತಂದೆಯೇ ಆಗಿರುತ್ತಾನೆ.

"ತಂದೆ ನನ್ನ ಮೊದಲ ಹೀರೋ
ತಂದೆಯ ಹೃದಯದ ರಾಣಿ ಮಗಳೇ"

*ತಂದೆಯ ಪ್ರೀತಿ ಸಮುದ್ರದಷ್ಟು ಆಳ,
ಮಗಳ ಮೇಲೆ ಸದಾ ಮಮತೆಯ ಕಾವಲು
ಜೀವನದ ದಾರಿಯಲ್ಲಿ ಎಷ್ಟೇ ದೂರವಾದರೂ,(ಮದುವೆ ನಂತರ)
ತಂದೆ-ಮಗಳ ಬಾಂಧವ್ಯ ಎಂದಿಗೂ ಕಡಿಮೆಯಾಗದು*"

ತಂದೆಯ ಗೌರವವು ಉಳಿಸುವುದು ಮತ್ತು ಬೆಳೆಸುವುದು ತನ್ನ ಮಗಳ ಕೈಯಲ್ಲಿಯೇ ಇರುತ್ತದೆ. ಪ್ರತಿ ತಂದೆಯು ತನ್ನ ಮಗಳಿಗೆ ಉನ್ನತ ಶಿಕ್ಷಣ ಕೊಡಿಸಬೇಕು ಎಂದು ಇಚ್ಛಿಸುತ್ತಾನೆ ಅವಳು ಎಂದಿಗೂ ಯಾರ ಮೇಲೂ ಅವಲಂಬಿಸದೆ ಸ್ವತಂತ್ರ ಜೀವನ ನಡೆಸಲಿ ಎಂದು ಬಯಸುತ್ತಾನೆ ..

**2. ಕುಟುಂಬದ ಆಧಾರಸ್ತಂಭ**

ಪ್ರತಿ ಕುಟುಂಬದ ಪ್ರತಿಯೊಬ್ಬರ ಕಷ್ಟ ಸುಖಗಳಿಗೆ ಸ್ಪಂದಿಸುತ್ತಾ ಅವರ ಆಸೆ ಆಕಾಂಕ್ಷೆಗಳನ್ನು ಈಡೇರಿಸಲು ಹಗಲಿರುಳು ಕೆಲಸ ಮಾಡಿ ನಮ್ಮ ಜೀವನದ ಕನಸುಗಳಿಗೆ ರೆಕ್ಕೆಯನ್ನು ನೀಡುತ್ತಾರೆ .
ಅಮ್ಮನ ಪ್ರೀತಿಯ ಹಾಗೆ ಅಪ್ಪನ ಪ್ರೀತಿ ಹೊರಗೆ ಕಾಣಿಸದೆ ಇದ್ದರು ಮೌನವಾಗಿಯೇ ಬೆಟ್ಟದಷ್ಟು ಪ್ರೀತಿಸುವ ವ್ಯಕ್ತಿ ಅಪ್ಪ

**3. ಮನೆಯ ಕಾವಲುಗಾರ**

ಚಂದ್ರನ ಬೆಳದಿಂಗಳ ತಂಪಿನಲ್ಲಿ ಲೋಕದ ಚಿಂತೆಯನ್ನು ಮರೆತು ನಿದ್ರಿಸುವಾಗ ಅಲ್ಲೊಬ್ಬ ಎಚ್ಚರದಲ್ಲೇ ನಿದ್ರಿಸುತ್ತಾ ಮನೆಯನ್ನು ಕಾವಲು ಕಾಯುತ್ತಿದ್ದ ನನ್ನಪ*

ತನ್ನ ಮಕ್ಕಳಿಗೆ ಕೊಂಚ ತೊಂದರೆಯಾದರೂ ಅಮ್ಮ ಅತ್ತು ಸಮಾಧಾನ ಪಡಿಸಿದರು ಅಪ್ಪ ಮಾತ್ರ ಮನಸಿನಲ್ಲೇ ಕೊರಗುವ ಜೀವಿ. ಅಮ್ಮನಷ್ಟು ಪ್ರೀತಿ ವ್ಯಕ್ತ ಪಡಿಸದಿದ್ದರು ಸಮುದ್ರದಷ್ಟು ಆಳ ಹೊಂದಿರುವ ಅಪ್ಪನ ಪ್ರೀತಿ ಅರಿತವರು ಯಾರು!!?

**4. ಅಪ್ಪನಿಂದ ಕಲಿತ ಪಾಠಗಳು**

ನಾನು ನಮ್ಮ ತಂದೆಯಿಂದ ತಾಳ್ಮೆ, ಪ್ರೀತಿಸುವ ಗುಣ, ಎಂತ ಸಮಸ್ಯೆ ಬಂದರು ದೈರ್ಯವಾಗಿ ಎದುರಿಸುವ ಮನೋಭಾವನೆ, ಎಂದೂ ಹಿಂದೆ ಸರಿಯದ ಮುನ್ನುಗುವ ಛಲ.

ಯಾವುದೇ ಕೆಲಸವಾದರೂ ಶ್ರದ್ಧೆ ಇಂದ ಮಾಡುವುದು ಪ್ರತಿಫಲ ಬಯಸದೇ ಇನ್ನೊಬ್ಬರಿಗೆ ಸಹಾಯ ಮಾಡುವುದು ಇಂತ ಗುಣಗಳನ್ನು ಕಲಿಸಿಕೊಟ್ಟ ನನ್ನ ತಂದೆಗೆ ಕೋಟಿ ನಮನಗಳು.

ಅಪ್ಪ ನಮ್ಮ ಜೀವದ ಮೊದಲ ಗುರು. ಅವರು ಮಾತಿಗಿಂತ ತಮ್ಮ ನಡತೆ ಇಂದ ಮತ್ತು ನುಡಿಗಳಿಂದ ಅನೇಕ ಮೌಲ್ಯಗಳನ್ನು ಕಲಿಸುತ್ತಾರೆ
ಶ್ರಮದ ಮಹತ್ವವನ್ನು ನನ್ನಲಿ ಬಿತ್ತಿದರು ಯಾವುದೇ ಕೆಲಸವಾದರೂ ಶ್ರದ್ದೆಯಿಂದ ಮಾಡಿದರೆ ಪ್ರಾಮಾಣಿಕತೆ ಮುಂದುವರೆದರೆ ಯಶಸ್ಸು ಸಿಕ್ಕೇ ಸಿಗುತ್ತದೆ ಎಂದು ತೋರಿಸಿಕೊಟ್ಟರು ನನ್ನಪ್ಪ

ಇನ್ನೂ ಗುರು ಗಳಿಗೆ ಗೌರವ ದೊಡ್ಡವರಿಗೆ ಗೌರವಿಸುವುದು ಮತ್ತು ನಮಗಿಂತ ಚಿಕ್ಕವರೆಗೆ ಪ್ರೀತಿಸುವುದು ಕಲಿತೆ

ಸಮಯವು ಯಾವುದೇ ಕಾರಣಕ್ಕೂ ಹಾಳು ಮಾಡದೆ ಸರಿಯಾಗಿ ಉಪಯೋಗಿಸಿಕೊಳ್ಳಬೇಕು ಎಂದು ಯಾವಾಗಲೂ ಹೇಳುತ್ತಾರೆ *ಕಳೆದು ಹೋದ ಸಮಯ ನಂತರ ಚಿಂತಿಸಿ ಫಲವಿಲ್ಲ* ಎಂದು ಪ್ರತಿಬಾರಿಯೂ ಹೇಳುತ್ತಾರೆ

ಹೀಗೆ, ಅಪ್ಪನಿಂದ ಕಲಿತ ಈ ಅಮೂಲ್ಯ ಪಾಠಗಳು ನನ್ನ ಜೀವನವನ್ನು ಉತ್ತಮ ದಾರಿಯಲ್ಲಿ ನಡೆಸಲು ಸಹಾಯ ಮಾಡುತ್ತಿವೆ. ಅಪ್ಪ ನನ್ನ ಜೀವನದ ನಿಜವಾದ ಮಾರ್ಗದರ್ಶಕ ಮತ್ತು ಆದರ್ಶ ವ್ಯಕ್ತಿ.

**5. ಕಾಯಕವೇ ಕೈಲಾಸ**

ನನ್ನಪ್ಪ ತನ್ನವರಿಗಾಗಿ ಹಗಲಿರುಳು ಶ್ರಮಿಸುವ ಜೀವ.. ತಾಯಿ ಮನೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರೆ. ತಂದೆ ವಿಶ್ರಮಿಸದೆ ಕೆಲಸ ಮಾಡುವ ವ್ಯಕ್ತಿ ನಮ್ಮ ಕನಸು ನನಸಾಗಿಸಲು ದುಡಿಯುವ ಜೀವ.
ಕಾಯಕವೇ ಕೈಲಾಸ
ಕೈ ಕೆಸರಾದರೆ ಬಾಯಿ ಮೊಸರು* ಎಂಬಂತೆ ನಂಬಿದವರು.. ತನ್ನನ್ನು ನಂಬಿದವರೇ ಸಿಹಿಯನ್ನೇ ತಿನಿಸಿ ತಾನು ಕಯಿಯನ್ನು ಸೇವಿಸುವ *ನೀಲಕಂಠ*

ಒಂದು ದಿನವೂ ಅಪ್ಪ ಹೊಸ ಹೊಸ ಬಟ್ಟೆ ಹಾಕಿ ಖುಷಿ ಪಟ್ಟಿದ್ದು ನಾ ಕಾಣೆ.ಮಕ್ಕಳಿಗೆ ಪ್ರತಿ ಹಬ್ಬಕ್ಕೂ ಹೊಸ ಬಟ್ಟೆ ಕೊಡಿಸಿ ಸಂಭ್ರಮಿಸುವ ಅಪ್ಪನ ಪ್ರೀತಿ ಬಲ್ಲವರು ಯಾರು.

**6. ಮಾತೃದೇವೋಭವ ಪಿತೃದೇವೋಭವ**

ಪಿತೃ ದೇವೋ ಭವ" ಮಾತೃದೇವೋಭವ ಎಂಬುದು ಭಾರತೀಯ ಸಂಸ್ಕೃತಿಯ ಮಹಾನ್ ಸಂದೇಶವಾಗಿದೆ. ಇದರ ಅರ್ಥ "ತಂದೆತಾಯಿಯನ್ನು ದೇವರಂತೆ ಗೌರವಿಸು" ಎಂಬುದಾಗಿದೆ. ತಂದೆ ಕುಟುಂಬದ ಆಧಾರಸ್ತಂಭವಾಗಿದ್ದು, ತನ್ನ ಮಕ್ಕಳ ಸುಖ, ಶಿಕ್ಷಣ ಮತ್ತು ಭವಿಷ್ಯಕ್ಕಾಗಿ ಅನೇಕ ತ್ಯಾಗಗಳನ್ನು ಮಾಡುತ್ತಾನೆ.

ಆದ್ದರಿಂದ ತಂದೆಯನ್ನು ಮೊದಲ ಗುರು ಜೀವನದ ಮಾರ್ಗದರ್ಶಕ.

ತಂದೆಯನ್ನು ತಾಯಿಯನ್ನು ಗೌರವಿಸುವುದು ದೇವರನ್ನು ಗೌರವಿಸಿದಷ್ಟೇ ಪುಣ್ಯ

ಗೀತೆ!!ತಾಯಿ ಮಾತ್ರ ತವರಲ್ಲ ತಂದೆನು ಇರದೇ ತಾಯಿಲ್ಲ ಆಕಾಶದಂತೆ ನಿನ್ನ ಮನಸಪ್ಪ

ಈ ಹಾಡನ್ನು ಬಹುಷ ಎಲ್ಲರೂ ಕೇಳಿರುತ್ತೀರಾ ಆದರೆ ಹೆಣ್ಣು ಮಕ್ಕಳಿಗೆ ಮಾತ್ರ ಈ ಹಾಡಿನ ಭಾವನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುತ್ತಾರೆ ನಿಜ ಅಲ್ವೇ!!

ಯಾಕೆಂದರೆ ಹೆಣ್ಣು ಮಗಳು ಮದ್ವೆ ಆದ ಬಳಿಕ ತವರು ಮನೆಗೆ ಬರುವಾಗ ಆಕೆಗೆ ಆಗುವ ಖುಷಿ ನಿಮಿಷ ಯಾಕೆಂದರೆ ಮದುವೆ ಆದ ಹೆಣ್ಣು *ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ* ತನ್ನ ಮನೆಗೆ ತಾನು ಅತಿಥಿ ಹಾಗೆ ಮಾಡುತ್ತದೆ.. ಇದೆ ಹೆಣ್ಣು ಮಕ್ಕಳ ಜೀವನ ಆದರೆ ತಂದೆಗೆ ಮಗಳೇ ಸರ್ವಸ್ವ

ಒಂದು ಕುಟುಂಬ ಸಂಪೂರ್ಣ ಆಗಬೇಕಾದರೆ ಅಲ್ಲಿ ತಂದೆತಾಯಿ ಇರಬೇಕು ಆಗ ಮಾತ್ರ ಮನೆ ಮತ್ತು ಮಕ್ಕಳ ಜೀವನ ಯಾವುದೇ ಕಷ್ಟ ಇಲ್ಲದೆ ಸಾಗಿಸಲು ಸುಲಭ.
"*ಬಹುಷ ಈ ಮಾತು ತಂದೆ ತಾಯಿ ಇಲ್ಲದವರಿಗೆ ಚೆನ್ನಾಗಿ ಅರ್ಥ ವಾಗುತ್ತದೆ*"

**7. ಅಪ್ಪನ ಪ್ರೀತಿ ಮತ್ತು ಕಾಳಜಿ**

ಅಪ್ಪನ ಪ್ರೀತಿಯನ್ನು ಕಂಡವರಿಗಿಂತ ಅವನ ಕೋಪವನ್ನು ನೋಡಿದವರೇ ಹೆಚ್ಚು.ಆದರೆ ಕಂಡರು ಕಾಣದಂತೆ ಪ್ರೀತಿ ಬೆಟ್ಟದಷ್ಟು ಇದ್ದರೂ ಮರೆಮಾಚಿ ಮಕ್ಕಳನ್ನು ಗದರುವ ಮೂಲಕ ತಂದೆ ಎಂದರೆ ಸ್ವಲ್ಪ ಭಯ ಎನ್ನುವ ರೀತಿಯಲ್ಲೇ ವರ್ತಿಸುವ ತಂದೆಯ ಪ್ರೀತಿಯನ್ನು ಮನವರಿಕೆ ಮಾಡಿಕೊಳ್ಳುವುದು ಕೊಂಚ ಕಷ್ಟವೇ ಸರಿ!!

ಯಾಕೆ ಅಪ್ಪವಾಗಲು ಅಮ್ಮನಷ್ಟು ಮುದ್ದಿಸುವುದಿಲ್ಲ? ಯಾಕೆ ಪ್ರೀತಿ ತೋರಿಸುವುದಿಲ್ಲ ಎಂದು ಅನಿಸುವುದು ಸಹಜ, ಆದರೆ ಮನೆಯಲ್ಲಿ ಎಲ್ಲರೂ ಪ್ರೀತಿ ಇಂದ ಬೈಯದೇ ಮಾಡಿದೆಲ್ಲ ಸರಿ ಅನ್ನುತಾ ಓದರೆ ಮಕ್ಕಳು ದಾರಿ ತಪ್ಪುವುದು ಕಂಡಿತಾ. ಎಂದು ಅಪ್ಪನು ಕೊಂಚ ಕೋಪಿಷ್ಟ ಆಗುತ್ತಾನೆ ಅಷ್ಟೇ..

**-ವಾಸ್ತವ-**

ಆಧುನಿಕ ಜಗತ್ತಿನಲ್ಲಿ ಅಪ್ಪನ ವಯಸ್ಸು 70 ಆದರೂ ದುಡಿದೂ ತಿನ್ನಬೇಕು ಎನ್ನುವ ಸ್ವಾಭಿಮಾನದ ತಂದೆಯರು ಇದ್ದಾರೆ ಆದರೆ ಅಂತವರಿಗೆ ವಯಸ್ಸು 30 ಆದರೂ ಇನ್ನೂ ನಾವು ತಂದೆಯನು ಅವಲಂಬಿಸಿ ಬದುಕುತ್ತೇವೆ ಎನ್ನುವ ಮಕ್ಕಳು ಒಂದು ಕಡೆ.
ಎಂತ ವಿಪರ್ಯಾಸ ನೋಡಿ ಈಗಿನ ಮಕ್ಕಳಿಗೆ ಜವಾಬ್ದಾರಿ ಅನ್ನುವುದೇ ತಿಳಿಯುತ್ತಿಲ್ಲ ಯಾಕೆಂದರೆ ಸರಿಯಾಗಿ ಅಭ್ಯಾಸ ಮಾಡುವ ಸಮಯದಲ್ಲಿ ಓದದೆ ಸಮಯ ವ್ಯರ್ಥ ಮಾಡಿ ಕೆಟ್ಟ ಕೆಟ್ಟ ಚಟಗಳಿಗೆ ಗುಲಾಮರಾಗಿ ಕೆಟ್ಟ ದಾರಿ ಹಿಡಿದು ತಂದೆ ತಾಯಿಯ ಮೇಲೆ ಹೊರೆ ಆಗುತ್ತಿದ್ದಾರೆ.

ನಾವು ಸಾಯುವ ವರೆಗೂ ತಂದೆ ತಾಯಿಯ ಸೇವೆ ಮಾಡಿದರು ಅವರ ಋಣ ತೀರಿಸಲು ಆಗುವುದಿಲ್ಲ. ಒಮ್ಮೆ ಅವರನ್ನು ಕಳೆದು ಕೊಂಡರೆ ಮತ್ತೆ ಮರಳಿ ಪಡೆಯಲು ಸಾಧ್ಯವೇ? ಎಂದು ತಿಳಿದು ಬದುಕು ನೀ ಇರುವ ತನಕ.
ಇದ್ದಾಗ ಕಡೆ ಗಣಿಸಿ ಹೊದಾಗ ಅತ್ತರಂತೆ _ಒಮ್ಮೆ ನಿಮ್ಮ ತಂದೆ ತಾಯಿಯ ಮಾರ್ಗದರ್ಶದಲ್ಲಿ ನಿನ್ನ ಜೀವನ ನಡಿಸಿ ನೋಡು ಸೋತವರು ಇತಿಹಾಸ ದಲ್ಲಿಯೇ ಇಲ್ಲ_

ಇಂದು ತಂದೆಯರ ದಿನ ಇದೆ ಎಂದು ಒಂದೇ ದಿನ ಸ್ಟೇಟಸ್ ಹಾಕಿ ಆಚರಿಸುವ ಬದಲು ಯಾವಾಗಲೂ ನಮ್ಮ ತಂದೆ ನನಗೆ ಮುಖ್ಯ ಎನ್ನುವ ರೀತಿಯಲ್ಲಿ ಬದುಕಿ ತೋರಿಸಿ ಹಾಗ ಮಾತ್ರ ನಿಮ್ಮ ತಂದೆಗೆ ನಿಮ್ಮ ಮೇಲೆ ಇನ್ನೂ ಗೌರವ ಪ್ರೀತಿ ಹೆಚ್ಚು

ನಾನು ನನ್ನ ತಂದೆಗೆ ಬರೆದಿರುವ ಕೆಲವು ಕವನಗಳು ನಿಮ್ಮ ಮುಂದೆ ಹಂಚಿಕೊಳ್ಳಲು ಬಯಸುವೆ

"ಭೂಮಿ ಅಷ್ಟೇ ತಾಳ್ಮೆ
ಆಕಾಶದಷ್ಟು ಪ್ರೀತಿ
ಸಹನೆಯ ಮಹಾ ಕಡಲು ನನ್ನಪ್ಪ"

"ಅಪ್ಪನ ಕೈ ಹಿಡಿದಾಗ
ಭಯವು ಮಾಯವಾಗುತ್ತದೆ
ಹಾಗೆ ಅಪ್ಪನ ಮಾತುಗಳನ್ನು
ಆಲಿಸಿದರೆ ಜೀವನದಲ್ಲಿ
ಬರವಸೆಯ ಬೆಳಕು ಚೆಲ್ಲುತ್ತದೆ"

ಅಪ್ಪಂದಿರ ದಿನದ ಶುಭಾಶಯಗಳು ನನ್ನ ಪ್ರೀತಿಯ ಅಪ್ಪನಿಗೆ. ನನ್ನ ಜೀವನ ಯಾವಾಗ ಪರಿಪೂರ್ಣ ವಾಗುತ್ತದೆ ಎಂದರೆ ನೀನು ಬಯಸಿದಂತೆ ನಾನು ಜೀವನದಲ್ಲಿ ಯಶಸ್ಸು ಕಂಡಾಗ ಮತ್ತು ನಿನ್ನ ಗೌರವವನ್ನು ಇನ್ನಷ್ಟು ಎತ್ತರಕ್ಕೆ ಬೆಳೆಸಿದಾಗ

I love you Dad ನಾನು ನಿನ್ನನು ನನ್ನ ಕೊನೆಯ ಉಸಿರಿರುವವರೆಗೂ ಪ್ರೀತಿಸುವೆ

# ಸರ್ವೋದಯ ಸಿಬಿಎಸ್ಇ ಶಾಲೆಯಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆ









ಧೈರ್ಯದ ದಾರಿ

**ಮಾನ್ವಿ, ಜೂ. 20**: ತಾಲೂಕಿನ ಸರ್ವೋದಯ ಸಿಬಿಎಸ್ಇ ಶಾಲೆಯಲ್ಲಿ ಶನಿವಾರ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಶಾಲೆಯ ಪ್ರಾಂಶುಪಾಲರು, ಶಿಕ್ಷಕ ವೃಂದ, ಸಿಬ್ಬಂದಿ ಹಾಗೂ ನೂರಾರು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ವಿವಿಧ ಯೋಗಾಸನಗಳನ್ನು ಪ್ರದರ್ಶಿಸುವ ಮೂಲಕ ಯೋಗದ ಮಹತ್ವವನ್ನು ಸಾರಿದರು.
ಶಾಲಾ ಆವರಣದಲ್ಲಿ ಆಯೋಜಿಸಲಾಗಿದ್ದ ಯೋಗ ದಿನಾಚರಣೆಯಲ್ಲಿ ವಿದ್ಯಾರ್ಥಿಗಳು ತಾಡಾಸನ, ವೃಕ್ಷಾಸನ, ಭುಜಂಗಾಸನ, ವಜ್ರಾಸನ ಸೇರಿದಂತೆ ವಿವಿಧ ಯೋಗಾಸನಗಳನ್ನು ಅಭ್ಯಾಸ ಮಾಡಿದರು. ಬೆಳಗಿನ ವೇಳೆಯಲ್ಲೇ ವಿದ್ಯಾರ್ಥಿಗಳು ಯೋಗ ಮ್ಯಾಟ್‌ಗಳೊಂದಿಗೆ ಸಾಲುಗಟ್ಟಿ ಕುಳಿತು ಸಾಮೂಹಿಕ ಯೋಗಾಭ್ಯಾಸ ನಡೆಸಿದ ದೃಶ್ಯ ಗಮನ ಸೆಳೆಯಿತು.
ಕಾರ್ಯಕ್ರಮದ ಆರಂಭದಲ್ಲಿ ಯೋಗ ದಿನದ ಮಹತ್ವದ ಕುರಿತು ಮಾತನಾಡಿದ ಶಿಕ್ಷಕರು, ಯೋಗವು ಕೇವಲ ವ್ಯಾಯಾಮವಲ್ಲ; ಅದು ದೇಹ, ಮನಸ್ಸು ಹಾಗೂ ಆತ್ಮದ ಸಮತೋಲನವನ್ನು ಕಾಪಾಡುವ ಜೀವನ ಪದ್ಧತಿ ಎಂದು ತಿಳಿಸಿದರು. ಇಂದಿನ ಒತ್ತಡದ ಬದುಕಿನಲ್ಲಿ ಯೋಗವು ಆರೋಗ್ಯಕರ ಹಾಗೂ ನೆಮ್ಮದಿಯ ಜೀವನಕ್ಕೆ ದಾರಿದೀಪವಾಗಿದೆ ಎಂದು ಅಭಿಪ್ರಾಯಪಟ್ಟರು.
ವಿದ್ಯಾರ್ಥಿಗಳಿಗೆ ಯೋಗದ ವಿವಿಧ ಆಸನಗಳು ಹಾಗೂ ಅವುಗಳ ಆರೋಗ್ಯಕರ ಪ್ರಯೋಜನಗಳ ಬಗ್ಗೆ ಮಾಹಿತಿ ನೀಡಲಾಯಿತು. ನಿಯಮಿತ ಯೋಗಾಭ್ಯಾಸದಿಂದ ದೈಹಿಕ ಸಾಮರ್ಥ್ಯ ವೃದ್ಧಿಯಾಗುವುದರ ಜೊತೆಗೆ ಏಕಾಗ್ರತೆ, ಆತ್ಮವಿಶ್ವಾಸ ಹಾಗೂ ಮಾನಸಿಕ ನೆಮ್ಮದಿ ಹೆಚ್ಚುತ್ತದೆ ಎಂದು ವಿವರಿಸಲಾಯಿತು.
ಈ ಸಂದರ್ಭದಲ್ಲಿ ಶಾಲಾ ಆವರಣದಲ್ಲಿ ಪರಿಸರ ಸಂರಕ್ಷಣೆಯ ಸಂದೇಶ ಸಾರುವ ನಿಟ್ಟಿನಲ್ಲಿ ಗಿಡ ನೆಡುವ ಕಾರ್ಯಕ್ರಮವೂ ನಡೆಯಿತು.
ಯೋಗ ಮತ್ತು ಪರಿಸರ ಎರಡೂ ಆರೋಗ್ಯಕರ ಬದುಕಿನ ಅವಿಭಾಜ್ಯ ಅಂಗಗಳಾಗಿದ್ದು, ಪ್ರತಿಯೊಬ್ಬರೂ ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಗಣ್ಯರು ಕರೆ ನೀಡಿದರು.
ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಯೋಗದ ಕುರಿತು ಭಾಷಣ, ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಜಾಗೃತಿ ಸಂದೇಶಗಳನ್ನು ನೀಡುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.




ಯೋಗ ದಿನಾಚರಣೆಯ ಅಂಗವಾಗಿ ಶಾಲೆಯಲ್ಲಿ ವಿಶೇಷ ವೇದಿಕೆ ಅಲಂಕರಿಸಲಾಗಿದ್ದು, ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಉತ್ಸಾಹದಿಂದ ಪಾಲ್ಗೊಂಡಿದ್ದರು.

# ಮೂಲಸೌಲಭ್ಯಗಳಿಂದ ವಂಚಿತ ಗೋಳಾ(ಕೆ) ಗ್ರಾಮ



**ಶಹಾಬಾದ: ಜೂ.20:**ಕಸದಿಂದ ತುಂಬಿಕೊಂಡಿರುವ ಚರಂಡಿಗಳು, ರಸ್ತೆಯ ಪಕ್ಕದಲ್ಲಿ ಬೆಳೆದಿರುವ ಗಿಡಗಂಟಿಗಳು, ಒಡೆದುಹೋದ ರಸ್ತೆಗಳು, ಶುದ್ಧ ಕುಡಿಯುವ ನೀರಿಲ್ಲದೇ ಪರದಾಡುವ ಜನರು, ಎಲ್ಲೆಂದರಲ್ಲಿ ಓಡಾಡುವ ಹಂದಿಗಳು ಸೇರಿದಂತೆ ಅನೇಕ ಮೂಲಭೂತ ಸೌಲಭ್ಯಗಳಿಲ್ಲದೇ ಶಹಾಬಾದ ತಾಲೂಕಿನ ಗೋಳಾ(ಕೆ) ಗ್ರಾಮ ನರಳಾಡುತ್ತಿದೆ.

ತಾಲೂಕಿನ ತೊನಸನಹಳ್ಳಿ(ಎಸ್) ಗ್ರಾಪಂಗೆ ಒಳಪಡುವ ಗೋಳಾ(ಕೆ) ಗ್ರಾಮದಲ್ಲಿ ಅಕ್ಷರಶಃ ಮೂಲಸೌಲಭ್ಯಗಳಿಲ್ಲದೆ ಇಲ್ಲಿನ ಜನರು ಸಂಕಷ್ಟ ಪಡುತ್ತಿದ್ದಾರೆ. ತಾಲೂಕಿಗೆ ಕೂಗಳತೆಯಲ್ಲಿರುವ ಈ ಗ್ರಾಮಕ್ಕೆ ಇಂದಿಗೂ ಉತ್ತಮ ಸೌಲಭ್ಯಗಳಿಲ್ಲ. ಗ್ರಾಮದಲ್ಲಿ ಒಳ ಪ್ರವೇಶ ಮಾಡಿದರೆ ಚರಂಡಿಗಳಲ್ಲಿ ಕಸ ತುಂಬಿ ನೀರು ಸರಾಗವಾಗಿ ಹರಿಯದೇ ದುರ್ವಾಸನೆ ಬೀರುತ್ತಿದೆ.ಇದರಿಂದ ಗ್ರಾಮಸ್ಥರು ನಿತ್ಯ ಗಬ್ಬು ವಾಸನೆಯಿಂದ ಬೇಸತ್ತು ಹೋಗಿದ್ದಾರೆ. ಅಲ್ಲದೇ ಗ್ರಾಮದ ಮುಜ್ಜು ಅವರ ಅಂಗಡಿಯ ಮುಂದೆ ಚರಂಡಿ ನೀರು ರಸ್ತೆಯ ಮೇಲೆ ಹರಿಯುತ್ತಿದೆ.ಇದರಿಂದ ಗ್ರಾಮಸ್ಥರು ಬೇಸತ್ತು ಹೋಗಿದ್ದಾರೆ. ಈ ಬಗ್ಗೆ ಹಲವು ಬಾರಿ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಿದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಚರಂಡಿಗಳ ಪಕ್ಕದಲ್ಲಿ ಹಾಗೂ ರಸ್ತೆಗಳ ಪಕ್ಕದಲ್ಲಿ ಗಿಡಗಂಟೆಗಳು ಮತ್ತು ಕಳೆಗಿಡಗಳು ಅತಿಯಾಗಿ ಬೆಳೆದು ನಿಂತಿದ್ದು, ಗ್ರಾಮಸ್ಥರಿಗೆ ತೀವ್ರ ತೊಂದರೆ ಉಂಟುಮಾಡುತ್ತಿದೆ. ಅಲ್ಲದೇ ಹಾವು ಚೇಳುಗಳ ಕಾಟದಿಂದ ಗ್ರಾಮಸ್ಥರು ಭಯಬೀತರಾಗಿದ್ದಾರೆ. ಶಾಲಾ ಮಕ್ಕಳು, ಮಹಿಳೆಯರು ಹಾಗೂ ಹಿರಿಯ ನಾಗರಿಕರು ಸಂಚಾರ ಮಾಡುವ ರಸ್ತೆಗಳ ಪಕ್ಕದಲ್ಲಿಯೇ ಗಿಡಗಂಟೆಗಳು ಬೆಳೆದಿರುವುದರಿಂದ ಅಪಾಯದ ಪರಿಸ್ಥಿತಿ ನಿರ್ಮಾಣವಾಗಿದೆ.ಸಂಜೆಯಾಗುತ್ತಲೇ ಸೊಳ್ಳೆಗಳ ಕಾಟ ಸಹಿಸದೇ ಸಂಕಷ್ಟ ಪಡುತ್ತಿದ್ದಾರೆ. ಎಲ್ಲಿ ಮಲೇರಿಯಾ, ಡೆಂಗ್ಯೂ ರೋಗ ಹರಡುವ ಸಾಧ್ಯತೆ ಎದುರಾಗಿದೆ.ಈಬಗ್ಗೆ ಅನೇಕ ಬಾರಿ ತಿಳಿಸಿದರೂ ಸಂಬಂಧಪಟ್ಟ ಪಿಡಿಓ ಯಾವುದೇ ಕ್ರಮಕೈಗೊಳ್ಳುತ್ತಿಲ್ಲ ಎಂಬುದು ಗ್ರಾಮಸ್ಥರ ದೂರಾಗಿದೆ.ಕೂಡಲೇ ಗ್ರಾಪಂ ಪಿಡಿಓ ಇಲ್ಲಿನ ಸಮಸ್ಯೆಗಳನ್ನು ಬಗೆಹರಿಸಿ, ಆರೋಗ್ಯಕರ ವಾತಾವರಣವನ್ನು ಕಲ್ಪಿಸಿ ಕೊಡುತ್ತಾರೆಯೇ ಎಂಬುದು ಕಾದು ನೋಡಬೇಕಾಗಿದೆ.

ಗ್ರಾಮದಲ್ಲಿ ಗಿಡಗಂಟಿಗಳು ಬೆಳೆದು ನಿಂತಿವೆ.ಇದರಿಂದ ರಾತ್ರಿ ಜನರು ವಿಷಜಂತುಗಳಿಂದ ಭಯಬೀತರಾಗಿದ್ದಾರೆ.ಚರಂಡಿಗಳು ತುಂಬಿಕೊಂಡು ಗಬ್ಬುವಾಸನೆ ಹರಡುತ್ತಿದೆ.ಇದರಿಂದ ಸೊಳ್ಳೆಗಳು ಹೆಚ್ಚಾಗಿವೆ. ಗ್ರಾಮದಲ್ಲಿ ಮಲೇರಿಯಾ, ಡೆಂಗ್ಯೂ ಹರಡುವ ಸಾಧ್ಯತೆ ಇದೆ.ಆದ್ದರಿಂದ ಇಲ್ಲಿನ ಸಮಸ್ಯೆಗಳನ್ನು ಆದಷ್ಟು ಬೇಗನೆ ಗ್ರಾಪಂ ಪಿಡಿಓ ಬಗೆಹರಿಸಿ.ಇಲ್ಲದಿದ್ದರೇ ಹೋರಾಟ ಅನಿವಾರ್ಯವಾಗುತ್ತದೆ.- ಯಲ್ಲಾಲಿಂಗ ಹೈಯ್ಯಾಳಕರ್ ತಾಲೂಕಾಧ್ಯಕ್ಷ ಕರವೇ ಶಹಾಬಾದ.

ಗ್ರಾಮದಲ್ಲಿ ಸಾಕಷ್ಟು ಸಮಸ್ಯೆಗಳು ಗ್ರಾಮಸ್ಥರನ್ನು ಕಾಡುತ್ತಿವೆ.ಆದರೆ ಇಲ್ಲಿಯವರೆಗೂ ಯಾವ ಅಧಿಕಾರಿಗಳು ಬಂದು ಪರಿಶೀಲನೆ ಮಾಡಲ್ಲ. ಈ ಬಗ್ಗೆ ತಿಳಿಸಿದರೂ ಕ್ಯಾರೇ ಎನ್ನುತ್ತಿಲ್ಲ.ಇಂತಹ ಬೇಜವಾಬ್ದಾರಿ ಅಧಿಕಾರಿಗಳ ವಿರುದ್ಧ ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸಲಾಗುವುದು.ಮೇಲಾಧಿಕಾರಿಗಳಾದ ತಾಪಂ ಇಓ ಅವರು ಕೂಡಲೇ ಕ್ರಮಕೈಗೊಂಡು ಇಲ್ಲಿನ ಸಮಸ್ಯೆಗಳನ್ನು ಬಗೆಹರಿಸಬೇಕು- ಮರಲಿಂಗ ಗಂಗಭೋ ಗ್ರಾಮಸ್ಥ ಗೋಳಾ(ಕೆ).

## ಆಲಮಟ್ಟಿ ಅಣೆಕಟ್ಟೆಯಲ್ಲಿ 524.256 ಮೀ. ನೀರಿನ ಸಂಗ್ರಹಕ್ಕೆ ಗೆಜೆಟ್ ಅಧಿಸೂಚನೆ ಹೊರಡಿಸಲು ಒತ್ತಾಯ



**ವಿಜಯಪುರ, ಜೂ. 20:** ಕೃಷ್ಣಾ ಕೊಳ್ಳ ಜಲ ಸಂರಕ್ಷಣಾ ಹೋರಾಟ ಸಮಿತಿ, ವಿಜಯಪುರ ವತಿಯಿಂದ ಶುಕ್ರವಾರ ಬಾಗಲಕೋಟೆ ಲೋಕಸಭಾ ಕ್ಷೇತ್ರದ ಸಂಸದ ಪಿ. ಸಿ. ಗದ್ದಿಗೌಡರ ಅವರನ್ನು ಭೇಟಿ ಮಾಡಿ, ಆಲಮಟ್ಟಿ ಅಣೆಕಟ್ಟಿನಲ್ಲಿ 524.256 ಮೀಟರ್ ಮಟ್ಟದವರೆಗೆ ನೀರಿನ ಸಂಗ್ರಹ ಹಾಗೂ ಬಳಕೆಗೆ ಸಂಬಂಧಿಸಿದಂತೆ ಮಹತ್ವದ ಮನವಿ ಪತ್ರ ಸಲ್ಲಿಸಲಾಯಿತು.

ಕೃಷ್ಣಾ ನದಿ ತಟದ ಜನರ ಬಹುಕಾಲದ ಹಾಗೂ ನ್ಯಾಯಸಮ್ಮತ ಬೇಡಿಕೆಯಾದ ಆಲಮಟ್ಟಿ ಅಣೆಕಟ್ಟಿನ ನೀರಿನ ಸಂಗ್ರಹ ಮತ್ತು ಬಳಕೆಯ ವಿಚಾರವು ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಅತ್ಯಂತ ಮಹತ್ವದ್ದಾಗಿದೆ ಎಂದು ಸಮಿತಿಯ ಮುಖಂಡರು ಸಂಸದರಿಗೆ ವಿವರಿಸಿದರು.

ಕೃಷಿ, ಕುಡಿಯುವ ನೀರು, ಕೈಗಾರಿಕೆ ಹಾಗೂ ಗ್ರಾಮೀಣಾಭಿವೃದ್ಧಿಯ ದೃಷ್ಟಿಯಿಂದ ಈ ಯೋಜನೆ ಲಕ್ಷಾಂತರ ಜನರ ಜೀವನದೊಂದಿಗೆ ನೇರವಾಗಿ ಸಂಬಂಧ ಹೊಂದಿದ್ದು, ಕೇಂದ್ರ ಸರ್ಕಾರ ಅಗತ್ಯ ಕ್ರಮ ಕೈಗೊಂಡು ಆಲಮಟ್ಟಿ ಅಣೆಕಟ್ಟಿನಲ್ಲಿ 524.256 ಮೀಟರ್ ಮಟ್ಟದವರೆಗೆ ನೀರಿನ ಸಂಗ್ರಹ ಹಾಗೂ ಬಳಕೆಗೆ ಶೀಘ್ರವೇ ಗೆಜೆಟ್ ಅಧಿಸೂಚನೆ ಹೊರಡಿಸಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರೊಂದಿಗೆ ಸಭೆ ಏರ್ಪಡಿಸಿ, ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರದ ಗಮನಕ್ಕೆ ಈ ವಿಷಯವನ್ನು ತಂದು, ನಿಯೋಗವನ್ನು ಕರೆದುಕೊಂಡು ಹೋಗುವಂತೆ ಸಂಸದರಲ್ಲಿ ಮನವಿ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಮಿತಿಯ ಮುಖಂಡರು, "ಆಲಮಟ್ಟಿ ಅಣೆಕಟ್ಟಿನ ನೀರಿನ ಸಂಗ್ರಹ ಹಾಗೂ ನೀರಿನ ಬಳಕೆಯ ಹಕ್ಕು ಕೇವಲ ಒಂದು ಜಿಲ್ಲೆಯ ಬೇಡಿಕೆಯಲ್ಲ. ಇದು ಇಡೀ ಕೃಷ್ಣಾ ಕೊಳ್ಳ ಪ್ರದೇಶದ ರೈತರು, ಯುವಕರು, ಮಹಿಳೆಯರು ಹಾಗೂ ಜನಸಾಮಾನ್ಯರ ಬದುಕಿನ ಪ್ರಶ್ನೆಯಾಗಿದೆ. ನೀರಿನ ನ್ಯಾಯಯುತ ಹಂಚಿಕೆ ಹಾಗೂ ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ನಮ್ಮ ಹೋರಾಟ ನಿರಂತರವಾಗಿ ಮುಂದುವರಿಯಲಿದೆ" ಎಂದು ಹೇಳಿದರು.

"ನೀರು ನಮ್ಮ ಹಕ್ಕು ಆಲಮಟ್ಟಿ ಅಣೆಕಟ್ಟೆಯಲ್ಲಿ 524.256 ಮೀ. ವರೆಗೆ ನೀರಿನ ಸಂಗ್ರಹ ಹಾಗೂ ಬಳಕೆ ನಮ್ಮ ಗುರಿ" ಎಂಬ ಘೋಷಣೆಯೊಂದಿಗೆ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುವುದಾಗಿ ಸಮಿತಿಯವರು ತಿಳಿಸಿದರು.

ಈ ಸಂದರ್ಭದಲ್ಲಿ ಸಮಿತಿಯ ಸದಸ್ಯರಾದ ಪಂಚಪ್ಪ ಕಲಬುರ್ಗಿ, ಅರವಿಂದ ಕುಲಕರ್ಣಿ, ಬಿ. ಭಗವಾನ್ ರೆಡ್ಡಿ, ಲಲಿತಾ ಬಿಜ್ಜರಗಿ, ಸುರೇಶ ಬಿಜಾಪುರ, ಸಿದ್ದಲಿಂಗ ಬಾಗೇವಾಡಿ, ಭೋಗೇಶ ಸೋಲಾಪುರ ಹಾಗೂ ಗುರುರಾಜ ಪಡಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

# ಮೊಹರಂ ಪರಸ್ಪರ ಶಾಂತಿ, ಸೌಹಾರ್ದತೆಯಿಂದ ಆಚರಿಸಿ : ಪಿಎಸ್ಐ ಉಪ್ಪಾರ



**ಅಥಣಿ : ಜೂ.20:**ಶಿವಯೋಗಿಗಳ ಪುಣ್ಯ ಕ್ಷೇತ್ರವಾದ ಅಥಣಿಯಲ್ಲಿ ಸರ್ವ ಧರ್ಮೀಯರೂ ಯಾವುದೇ ಭೇದ ಭಾವ ಇಲ್ಲದೇ ಒಗ್ಗಟ್ಟಿನಿಂದ ಹಬ್ಬಗಳನ್ನು ಆಚರಿಸುತ್ತಾ ಬಂದಿರುವುದು ಹೆಮ್ಮೆಯ ವಿಷಯ. ಅದೇ ಪರಂಪರೆಯನ್ನು ಮುಂದುವರಿಸಿಕೊಂಡು, ಈ ಬಾರಿಯ ಮೊಹರಂ ಹಬ್ಬವನ್ನು ಎಲ್ಲ ಸಮುದಾಯದವರು ಪರಸ್ಪರ ಶಾಂತಿ ಮತ್ತು ಸೌಹಾರ್ದತೆಯಿಂದ ಆಚರಿಸಬೇಕು ಎಂದು ಅಥಣಿ ಪೊಲೀಸ್ ಉಪನಿರೀಕ್ಷಕ ಗಿರಮಲಪ್ಪ ಉಪ್ಪಾರ ಮನವಿ ಮಾಡಿದರು.

ಅವರು ಪಟ್ಟಣದ ಪೊಲೀಸ್ ಸಮುದಾಯ ಭವನದಲ್ಲಿ ಮೊಹರಂ ಹಬ್ಬದ ಪ್ರಯುಕ್ತವಾಗಿ

ಆಯೋಜಿಸಲಾಗಿದ್ದ ಶಾಂತಿ ಪಾಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಹಬ್ಬದ ಸಂದರ್ಭದಲ್ಲಿ ಯಾರೂ ಕೂಡ ಅಹಿತಕರ ಘಟನೆಗಳಿಗೆ ಆಸ್ಪದ ನೀಡಬಾರದು. ಸಾರ್ವಜನಿಕರು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಸಹಕರಿಸಬೇಕು. ಒಂದು ವೇಳೆ ಹಬ್ಬದ ಹೆಸರಿನಲ್ಲಿ ಶಾಂತಿ ಭಂಗ ಉಂಟುಮಾಡುವ ಅಥವಾ ಅಹಿತಕರ ಕೃತ್ಯಗಳಲ್ಲಿ ತೊಡಗುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು" ಎಂದು ಅವರು ಎಚ್ಚರಿಕೆ ನೀಡಿದರು.

ಕಾನೂನಿಗಿಂತ ದೊಡ್ಡವರು ಯಾರು ಇಲ್ಲ ಕಾನೂನು ಎಲ್ಲರಿಗೂ ಒಂದೇ ಯಾರು ಯಾವುದೇ ಕಾರಣಕ್ಕೂ ಕಾನೂನು ಕೈಗೆತ್ತಿಕೊಳ್ಳಬಾರದು ಏನೇ ಅಹಿತಕರ ಘಟನೆಗಳು ಸಂಭವಿಸಿದಲ್ಲಿ ತಕ್ಷಣ ಪೊಲೀಸ್ ಠಾಣೆಗೆ ಸಂಪರ್ಕಿಸಿ ಮಾಹಿತಿ ನೀಡಿ ಎಂದರು.

ಈ ವೇಳೆ ಮುಸ್ಲಿಂ ಸಮಾಜದ ಮುಖಂಡ ಅಸ್ಲಮ್ ನಾಲಬಂದ ಮಾತನಾಡಿ ಅಥಣಿ ಶಾಂತಿಗೆ ಹೆಸರುವಾಸಿಯಾಗಿದೆ ಇಲ್ಲಿನ ಜನರು ಹಬ್ಬ ಹರಿದಿನಗಳಲ್ಲಿ ನಾವೆಲ್ಲರೂ ಒಂದೇ ಎನ್ನುವ ರೀತಿಯಲ್ಲಿ ಒಗ್ಗಟ್ಟಾಗಿ ಹಬ್ಬಗಳನ್ನು ವಿಜೃಂಭಣೆಯಿಂದ ಆಚರಿಸುತ್ತಾ ಬಂದಿದ್ದೇವೆ. ಮುಂದೆಯೂ ಇದೇ ರೀತಿ ಎಲ್ಲ ಸಮುದಾಯದವರು ಸೇರಿ ಶಾಂತಿ ಸೌಹಾರ್ದತೆ ಮತ್ತು ಸಹೋದರತೆಯಿಂದ ಹಬ್ಬಗಳನ್ನು ಆಚರಿಸುತ್ತೇವೆ ಯಾವುದೇ ರೀತಿಯ ಅಹಿತಕರ ಘಟನೆಗಳಿಗೆ ಅವಕಾಶ ನೀಡುವುದಿಲ್ಲ ಎಂದು ಹೇಳಿದರು.

ಈ ವೇಳೆ ಮುಖಂಡರಾದ ಶಶಿ ಸಾಳವೆ. ಶಬ್ಬೀರ ಸಾತಬಚ್ಚೆ, ಮಂಜು ಹೋಳಿಕಟ್ಟಿ. ರಸೂಲಸಾಬ ನದಾಫ್ ಮಾತನಾಡಿ ಮೊಹರಂ ಭಾವೈಕ್ಯತೆಯ ಹಬ್ಬವಾಗಿದ್ದು. ಇಲ್ಲಿ ಯಾವುದೇ ಕಾರಣಕ್ಕೂ ಅಹಿತಕರ ಘಟನೆಗಳು ನಡೆಯುವುದಿಲ್ಲ. ಗಂಧ ಹಾಗೂ ನೈವೇದ್ಯ ಅರ್ಪಿಸಲು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಬರುವುದರಿಂದ ಭದ್ರತೆಗೆ ಹೆಚ್ಚಿನ ಪೊ?ಲೀಸ್ ಸಿಬ್ಬಂದಿಗಳನ್ನು ಒದಗಿಸಬೇಕು. ಜನ ದಟ್ಟಣೆ ಆಗದಂತೆ ಬ್ಯಾರಿಕೇಡ್ ಹಾಕಬೇಕು ಎಂದು ಸಲಹೆ ನೀಡಿ ಮೊಹರಂ ಹಬ್ಬವನ್ನು ಯಾವುದೇ ರೀತಿಯ ತೊಂದರೆಯಾಗದಂತೆ ಅಹಿತಕರ ಘಟನೆಗಳು ನಡೆಯದಂತೆ ಶಾಂತಿಯುತವಾಗಿ ಆಚರಿಸುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸಭೆಯಲ್ಲಿ ಅಂಜುಮನ್ ಕಮಿಟಿ ಅಧ್ಯಕ್ಷ ಸೈಯ್ಯದಅಮೀನ ಗದ್ಯಾಳ, ಮುಖಂಡರಾದ ಶೇಖರ್ ಸೌದಾಗರ, ಅಯಾಜ ಮಾಸ್ಟರ್, ಶಿವಾನಂದ ಸೌದಾಗರ, ಇಲಿಯಾಸ್ ಹಿಪ್ಪರಗಿ, ಜುಬೇರ್ ನಾಲಬಂದ, ಮಂಜು ಹೋಳಿಕಟ್ಟಿ, ಆಸೀಫ್ ತಾಂಬೋಳಿ, ಮಹೇಂದ್ರ ರಾಜಂಗಳೆ, ಸುಭಾಸ್ ಸಾಳುಂಕೆ. ಇಮ್ರಾನ್ ದ್ರಾಕ್ಷಿ. ಸೇರಿದಂತೆ ವಿವಿಧ ಸಮುದಾಯದ ಮುಖಂಡರು ಮತ್ತು ಗಣ್ಯರು ಭಾಗವಹಿಸಿದ್ದರು.

# ವಿಕಸಿತ ಭಾರತದ ಗುರಿ ತಲುಪಲು ಔಪಚಾರಿಕ ವಲಯದ ಉದ್ಯೋಗ ಸೃಷ್ಟಿ ಅಗತ್ಯ: ಯದುವೀರ್ ಒಡೆಯರ್

**ಮೈಸೂರು, ಜೂ.20:-** ಭಾರತದ ಸಮಗ್ರ ಮತ್ತು ಸಂಪೂರ್ಣ ಆರ್ಥಿಕ ಅಭಿವೃದ್ಧಿಗಾಗಿ ಪ್ರತಿಯೊಬ್ಬರಿಗೂ ಉದ್ಯೋಗದ ಅವಕಾಶಗಳು ಸಿಗಬೇಕು ಹಾಗೂ ದೇಶದ ಬಹುಪಾಲು ಜನರನ್ನು ಅನೌಪಚಾರಿಕ ವಲಯದಿಂದ ಔಪಚಾರಿಕ ವಲಯಕ್ಕೆ ಫಾರ್ಮಲ್ ಸೆಕ್ಟರ್ ತರುವುದು ಇಂದಿನ ಅಗತ್ಯವಾಗಿದೆ ಎಂದು ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಹೇಳಿದರು.

ಇಂದು ನಗರದ ವಿದ್ಯಾವರ್ಧಕ ಕಾಲೇಜಿನಲ್ಲಿ ಪ್ರಾದೇಶಿಕ ಕಚೇರಿಯ ನೌಕರರ ಭವಿಷ್ಯನಿಧಿ ಸಂಸ್ಥೆಯ ವತಿಯಿಂದ ಮೂಲಕ ಆಯೋಜಿಸಲಾಗಿದ್ದ ಪ್ರಧಾನಮಂತ್ರಿ ವಿಕಸಿತ ಭಾರತ ರೋಜ್‌ಗಾರ್ ಯೋಜನೆ ಯ ಪ್ರೋತ್ಸಾಹ ಧನ ವಿತರಣ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಧಾನಮಂತ್ರಿಯವರು ವಿಕಸಿತ ಭಾರತಕ್ಕಾಗಿ ದೊಡ್ಡ ಗುರಿಯನ್ನು ಇಟ್ಟುಕೊಂಡಿದ್ದಾರೆ. ಸಮಗ್ರ ಭಾರತೀಯರ ಆರ್ಥಿಕ ಸಬಲೀಕರಣವೇ ಇದರ ಮೂಲ ಉದ್ದೇಶವಾಗಿದೆ. ಅಂತ್ಯೋದಯದ ಸದ್ಕಲ್ಪನೆಯ ಮೂಲಕ ಸಮಾಜದ ಕೊನೆಯ ವ್ಯಕ್ತಿಗೂ ಗುಣಮಟ್ಟದ ಬದುಕನ್ನು ಒದಗಿಸುವುದು ಮತ್ತು ಎಲ್ಲರಿಗೂ ಉದ್ಯೋಗಾವಕಾಶಗಳನ್ನು ಕಲ್ಪಿಸುವುದು ಈ ಯೋಜನೆಯ ಆಶಯವಾಗಿದೆ ಎಂದು ಅವರು ಹೇಳಿದರು.

ದೇಶದ ಆರ್ಥಿಕ ವ್ಯವಸ್ಥೆ ಬಲಗೊಳ್ಳಬೇಕಾದರೆ ಔಪಚಾರಿಕ ವಲಯದ ವ್ಯಾಪ್ತಿ ಹೆಚ್ಚಾಗಬೇಕು. ಈ ನಿಟ್ಟಿನಲ್ಲಿ ಸಾಮಾಜಿಕ ಭದ್ರತೆಯ ಜಾಲವನ್ನು ವಿಸ್ತರಿಸುವುದು ಅತ್ಯಂತ ಪ್ರಮುಖವಾಗಿದೆ. ಆರೋಗ್ಯದ ದೃಷ್ಟಿಯಿಂದ ಅಥವಾ ಯಾವುದೇ ತುರ್ತು ಸಂದರ್ಭದಲ್ಲಿ ನೆರವಾಗಲು ಈ ಸಾಮಾಜಿಕ ಭದ್ರತೆ ಪ್ರತಿಯೊಬ್ಬರಿಗೂ ಸಹಕಾರಿಯಾಗಲಿದೆ ಈ ನಿಟ್ಟಿನಲ್ಲಿ ಪಿಎಂ ರೋಜ್‌ಗಾರ್ ಯೋಜನೆ ಪ್ರಮುಖ ಪಾತ್ರ ವಹಿಸಲಿದೆ ಎಂದರು.

ಈ ಮಹತ್ವಾಕಾಂಕ್ಷಿ ಯೋಜನೆಗಾಗಿ ಕೇಂದ್ರ ಸರ್ಕಾರ ಸುಮಾರು 1 ಲಕ್ಷ ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದೆ. ಈಗಾಗಲೇ 2400 ಕೋಟಿಗೂ ಅಧಿಕ ಮೊತ್ತದ ವಿತರಣೆ ಪ್ರಕ್ರಿಯೆ ನಡೆಯುತ್ತಿದೆ. ಅರ್ಹ ಫಲಾನುಭವಿಗಳಿಗೆ ಹಂತಹಂತವಾಗಿ ಒಟ್ಟು 15,000 ವರೆಗೆ ಪ್ರೋತ್ಸಾಹ ಧನ ಮತ್ತು ತರಬೇತಿಯ ನೆರವು ಸಿಗಲಿದೆ. ಇದರೊಂದಿಗೆ ಉದ್ಯೋಗದಾತರಿಗೂ ಕೂಡ ಪ್ರತಿ ಉದ್ಯೋಗ ಸೃಷ್ಟಿಗೆ 3,000 ಗಳ ಪ್ರೋತ್ಸಾಹಕ ಸೌಲಭ್ಯ ಸಿಗುವುದರಿಂದ ಉದ್ಯಮಿಗಳು ಮತ್ತು ಸಾರ್ವಜನಿಕರು ಇದರ ಬಗ್ಗೆ ಹೆಚ್ಚಿನ



ಪ್ರಚಾರ ನಡೆಸಿ, ಅರ್ಹರು ಇದರ ಸೌಲಭ್ಯ ಪಡೆಯುವಂತೆ ನೋಡಿಕೊಳ್ಳಬೇಕು ಎಂದು ಹೇಳಿದರು.

ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಬಿ. ಸದಾಶಿವೇಗೌಡ ಅವರು ಮಾತನಾಡಿ ನಮ್ಮ ದೇಶದಲ್ಲಿ ಸಾಮಾಜಿಕ ಭದ್ರತೆಯನ್ನು ಹೆಚ್ಚಿಸುವ ಉದ್ದೇಶದಿಂದ ಜಾರಿಗೆ ತರಲಾಗುತ್ತಿರುವ ವಿವಿಧ ಯೋಜನೆಗಳು ಇಂದು ಯಶಸ್ವಿಯಾಗಿ ಅನುಷ್ಠಾನಗೊಳ್ಳುತ್ತಿರುವುದು ದೇಶದ ಭವಿಷ್ಯವನ್ನೇ ಬದಲಾಯಿಸಲಿದೆ ಎಂದು ಹೇಳಿದರು.

2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡಬೇಕೆಂಬ ಬಲವಾದ ದೃಷ್ಟಿಕೋನ ನಮ್ಮ ಮುಂದಿದೆ. ಈ ಗುರಿಯನ್ನು ತಲುಪಲು ನಾವೆಲ್ಲರೂ ಕೈಜೋಡಿಸಬೇಕಾಗಿದೆ. ಉದ್ಯೋಗದಾತರು ಉದ್ಯೋಗಿಗಳು ಮತ್ತು ಶಿಕ್ಷಣ ಸಂಸ್ಥೆಗಳು ಸೇರಿದಂತೆ ಪ್ರತಿಯೊಬ್ಬ ನಾಗರಿಕನಲ್ಲೂ ಇದು ನನ್ನ ದೇಶ, ನನ್ನ ದೇಶ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಬೇಕು ಎಂಬ ಆಕಾಂಕ್ಷೆ ಮತ್ತು ಆಸೆ ಇರಬೇಕು ಎಂದರು.

ಕಾರ್ಯಕ್ರಮದಲ್ಲಿ ಇಪಿಎಸ್‌ಓ ಅಧಿಕಾರಿಗಳಾದ ಷಡಕ್ಷರಿ ಗೋಪಾಲ್ ರೆಡ್ಡಿ, ಗಣ್ಯರಾದ ಟಿ.ಸಿ.ಪೂರ್ಣಿಮಾ ಮುರಳಿಧರನ್, ಗಿರೀಶ್ ಲಿಂಗಣ್ಣ,ಪವನ್ ಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ದುಡ್ಡು ಇಲ್ಲದಿದ್ದರು ಪ್ರಾಣ ಉಳಿಸುವ ದಾನಿಯೇ ರಕ್ತ ದಾನಿ :ಶಿವರಾಜ ಅಂಡಗಿ

**ಕಲಬುರಗಿ:**ಬಡವರಿಗೆ ಅಷ್ಟೇ ರಕ್ತ ಕಡಿಮೆ ಆಗಲ್ಲ ಅದು ಶ್ರೀಮಂತರಿಗೂ ಆಗುತ್ತೆ ಹಣ ತೋಗಳದೆ ಹೆಸರು ಬಯಸದೆ ಸ್ವಯಂ ಪ್ರೇರಣೆಯಿಂದ ರಕ್ತ ದಾನ ಮಾಡುವರೇ ನಿಜವಾದ ಹಿರೋಗಳು. ದುಡ್ಡು ತೆಗೆದು ನಟನೆ ಮಾಡಿ ಬರಿ ಹಿರೋಗಳು ಆಗುವುದು ಬಹಳಷ್ಟು ನಟರು ಬೆಂಗಳೂರಿನಲ್ಲಿ ನೋಡಿದ್ದೆವೆ.

ಎನ್ನುತ್ತಾ ಅಂತಹ ನಿಜವಾದ ಹಿರೋಗಳು ನಮ್ಮ ಊರಲ್ಲೆ ನಮ್ಮ ಜೋತೆಯಲ್ಲೆ ಇದ್ದಾರೆ ಎಂಬುದು ಹೆಮ್ಮೆಯ ವಿಷಯ ಎನ್ನುತಾ ಈ ನಾಲ್ಕು ಜನ ರಕ್ತ ಧಾನಿಗಳು ಅನೇಕ ಬಾರಿ ರಕ್ತ ಧಾನ ಮಾಡಿದ್ದಾರೆಂದು ಭಜನೆ ಮಾಡುವ ಸಂದರ್ಭದಲ್ಲಿ ಇಂದು ರಕ್ತ ಧಾನಿಗಳ ದಿನದ ವಿಷಯ ಕುರಿತು ಮಾತು ಬಂದಾಗ ಆ ಸಂದರ್ಭದಲ್ಲಿ ಉಪಸ್ಥಿತರಿದ್ದ ಚಂದ್ರಶೇಖರ ಎಲೆರಿ, ವಿಶ್ವನಾಥ ಬಾಳದೆ, ರಾಜು ಪಟ್ಟೆದ್, ಡಾ॥ ವೀವೆಕಾನಂದ ಬುಳ್ಳಾ, ಮಲ್ಲೇಶಪ್ಪ ಬಾಳದೆ ಅವರಿಗೆ ಗೌರವಿಸುವಂತಹ ಅವಕಾಶ ನನಗೆ ಅಧಿಕ ಮಾಸದ ಪೂಣ್ಯದ ಫಲವೆಂದು ಭಾವಿಸಿದ್ದೆನೆ ಎಂದು ಟೆಂಗಳಿ ಅಂಡಗಿ ಪ್ರತಿಷ್ಠಾನ ಅಧ್ಯಕ್ಷ ಶಿವರಾಜ ಅಂಡಗಿ ರಕ್ತ ಧಾನಿಗಳಿಗೆ ಗೌರವಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಭೀಮೆಶ್ವರ ದೇವಾಸ್ಥಾನ ಟ್ರಸ್ಟ ಕಮಿಟಿಯ ಅಧ್ಯಕ್ಷರು ವೀರೆಂದ್ರ ವಾಲಿ, ಹಿರಿಯರಾದ ಭಿಮರಾಯ ನೀಲಳ್ಳಿ, ವಿರೇಶ ನಿಲೂರ, ಭಿಮರಾಯ ಅಲಚೇರಿ,



ರೇವಶಟ್ಟಿ ಮಲಕೋಡ್, ಶಿವರಾಜ ತೆಲಗಾಣಿ, ಶಿವಕುಮಾರ ನಾಗಶೇಟ್ಟಿ, ಶರಣ ಹೊಸಳ್ಳಿ, ಭಿಮಾಶಂಕರ ದೇವರಮನಿ, ನಾಗೇಂದ್ರಪ್ಪ ಹೊಂದೆ, ಬಸವರಾಜ ಕಡ್ಲೆ, ಶರಣಯ್ಯ ಮಠಪತಿ, ಜಗದೀಶ ಹಿರೇಮಠ ಉಪಸ್ಥಿತರಿದ್ದರು.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE